MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

YUVA MARGA KANNADA DAILY NEWS PAPER

ಸಂಪುಟ: 05 | ಸಂಚಿಕೆ: 24 | ಶನಿವಾರ : 08-11-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ. 2-00

VOLUME: 05 | ISSUE: 24 | SATURDAY : 08-11-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಸಕ್ಕರೆ ಕಾರ್ಖಾನೆಗಳ ಸಮಸ್ಯೆ ಕೇಳಿ ಸಿಎಂ ಸಿದ್ದರಾಮಯ್ಯ ಸುಸ್ತು..!



**ಬೆಂಗಳೂರು, ನ.7–**ಕಬ್ಬು ಬೆಳೆಗಾರರ ಬೇಡಿಕೆ ಹಾಗೂ ಸಮಸ್ಯೆ ಪರಿಹಾರಕ್ಕೆ ಕರೆಯಲಾಗಿದ್ದ ಸಭೆಯಲ್ಲಿ ಸಕ್ಕರೆ ಕಾರ್ಖಾನೆಗಳ ಸಮಸ್ಯೆಗಳ ಮಹಾಪೂರವೇ ಕೇಳಿಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದಲ್ಲಿಂದು ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕಾಗಿ ಕರೆಯಲಾಗಿದ್ದ ಸಭೆಯಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲಿಕರು ತಾವು ಎದುರಿಸುತ್ತಿರುವ ಹತ್ತು ಹಲವು ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಕೇಂದ್ರ ಸರ್ಕಾರದ ನಿರ್ಧಾರದಿಂದ ಆಗುತ್ತಿರುವ ತೊಂದರೆಗಳನ್ನು ತೋಡಿಕೊಂಡಿದ್ದಾರೆ.

ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಕರೆದಿದ್ದ ಸಭೆಯಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಸಲಹೆ ನೀಡುವ ಬದಲು ತಾವು ಎದುರಿಸುತ್ತಿರುವ ಸಮಸ್ಯೆಗಳನ್ನೆ ಹೇಳಿದ್ದು, ಮುಖ್ಯಮಂತ್ರಿಗಳ ತಲೆಬಿಸಿಯನ್ನು ಮತ್ತಷ್ಟು ಹೆಚ್ಚಿಸಿದೆ. ಇದರಿಂದ ಅತ್ತ ಧರಿ ಇತ್ತು ಹುಲಿ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರ ಸಮಸ್ಯೆ ಪರಿಹರಿಸುವುದೋ ಅಥವಾ ಸಕ್ಕರೆ ಕಾರ್ಖಾನೆಗಳ ಮಾಲೀಕರ ತೊಂದರೆ ನಿವಾರಿಸುವುದೋ ಎಂಬ ಸಂದಿಗ್ಧ ಪರಿಸ್ಥಿತಿ ಎದುರಿಸುವಂತಾಗಿದೆ. ಕಳೆದ ಐದು ವರ್ಷದಿಂದ ಎಂಎಸ್ಪಿ ಹೆಚ್ಚಳ ಮಾಡಿಲ್ಲ, ನಾಲ್ಕು ವರ್ಷದಿಂದ ಎಥೆನಾಲ್ ದರವನ್ನೂ ಕೇಂದ್ರ ಸರ್ಕಾರ ಹೆಚ್ಚಿಸಿಲ್ಲ. ಇದರಿಂದ ನಮಗೆ ಸಮಸ್ಯೆ ಆಗಿದೆ ಎಂದು ಸಕ್ಕರೆ ಕಾರ್ಖಾನೆಗಳ ಮಾಲೀಕರು ತಮ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ ಎನ್ನಲಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿಗಳು, ಎಂಎಸ್ಪಿ ಮತ್ತು ಎಥೆನಾಲ್ ದರ ಹೆಚ್ಚಿಸುವಂತೆ ನೀವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೀರಾ ಎಂದು ಪ್ರಶ್ನಿಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರದ ರಫ್ತು ನೀತಿಯಿಂದಾಗಿ ರಫ್ತು ಮಾಡುವ ಸಕ್ಕರೆ ಬೆಲೆ, ಸ್ಥಳೀಯ ಸಕ್ಕರೆ ಬೆಲೆಗಿಂತ ತುಂಬ ಕಡಿಮೆ ಇದೆ. ಕೇಂದ್ರದಿಂದ ಬರಬೇಕಾ ಶೇ.6ರಷ್ಟು ಎಥೆನಾಲ್ ಸಬ್ಸಿಡಿ ಸರಿಯಾಗಿ ಬರುತ್ತಿಲ್ಲ. ಇದರಿಂದಲೂ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ತೊಂದರೆ ಆಗಿದೆ. ಎಂಬುದನ್ನು ಸಭೆಯ ಗಮನಕ್ಕೆ ತರಲಾಗಿದೆ. ಕೇಂದ್ರದ ನಾನಾ ನೀತಿಯಿಂದ ದಕ್ಷಿಣ ಭಾರತದ ಸಕ್ಕರೆ ಕಾರ್ಖಾನೆಗಳಿಗೆ ತುಂಬಾ ಅನ್ಯಾಯ ಆಗುತ್ತಿದೆ. ಎಥೆನಾಲ್ ಮಿಶ್ರಣ ಮತ್ತು ನೇರ ಎಥೆನಾಲ್ ಬಳಕೆ ಬಗ್ಗೆ ಇರುವ ನಿಯಮಗಳು ಹೊರೆಯಾಗುತ್ತಿದೆ. ಇದನ್ನು ಸರಿಪಡಿಸುವಂತೆ ಕೇಂದ್ರಕ್ಕೆ ಪತ್ರ ಬರೆಯುವಂತೆ ಒತ್ತಾಯಿಸಿದ್ದಾರೆ ಎಂದು ತಿಳಿದು ಬಂದಿದೆ.

ಒಟ್ಟು ಸಕ್ಕರೆ ಉತ್ಪಾದನೆ ಮತ್ತು ಮಾರಾಟದ ಲೆಕ್ಕಾಚಾರದಲ್ಲಿ ಉತ್ತರ ಭಾರತದ ಕಾರ್ಖಾನೆಗಳಿಗೆ ಅನುಕೂಲ ಆಗುವ ಪರಿಸ್ಥಿತಿ ಇದೆ. ದಕ್ಷಿಣ ಭಾರತದ ಕಾರ್ಖಾನೆಗಳಿಗೆ ಅನ್ಯಾಯ ಆಗುತ್ತಲೇ ಇದೆ. ಆದ್ದರಿಂದ ಉತ್ತರ ಭಾರತದ ಕಾರ್ಖಾನೆ ಮಾಲೀಕರು ಕೇಂದ್ರದ ವಿರುದ್ಧ ಧ್ವನಿ ಎತ್ತುವುದಿಲ್ಲ. ನಾವು ಧ್ವನಿ(2ನೇಪುಟಕ್ಕೆ)

## ಶ್ರೀಮಹಾಂತೇಶ್ವರ ಮಠದಲ್ಲಿ 5 ಸಾವಿರದ ಒಂದು ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮ



**ಯುವ ಮಾರ್ಗ ಸುದ್ದಿ**

**ಮಾನ್ವಿ,ನ.7–** ತಾಲೂಕಿನ ಕರೆಗುಡ್ಡ ಗ್ರಾಮದ ಶ್ರೀ ಮಹಾಂತೇಶ್ವರ ಮಠದಲ್ಲಿ ಶ್ರೀಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪಟ್ಟಾಧಿಕಾರ ರಜತ ಮಹೋತ್ಸವ ,ನೂತನ ಎರಡು ಗೋಪುರಗಳ ಲೋಕಾರ್ಪಣೆ, ಕಳಸರೋಹಣ, 5 ಸಾವಿರದ ಒಂದು ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮವನ್ನು ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ಉದ್ಘಾಟಿಸಿ ಮಾತನಾಡಿ ವಿಶ್ವದ ವಿವಿಧ ದೇಶಗಳಲ್ಲಿ ಆಶಾಂತಿಯಿಂದ ಕೋಮು ದ್ವಶದಿಂದ ಜನರು ನೆಮ್ಮದಿಯನ್ನು ಕಳೆದುಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ನಮ್ಮ ರಾಜ್ಯದ ಮಠಗಳು ಸಮಾಜದಲ್ಲಿ ಶಾಂತಿಯನ್ನು ಸೌಹಾರ್ಧತೆಯನ್ನು ಭವ್ಯೆಕ್ಯತೆಯನ್ನು ಮೂಡಿಸುವುದರ ಜೊತೆಗೆ ಶೈಕ್ಷಣಿಕ ಹಾಗೂ ಸಮಾಜಿಕವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ರಾಜ್ಯದ ಅಭಿವೃದ್ದಿಗೆ ಮಹಾತ್ತರವಾದ ಕೊಡುಗೆಯನ್ನು ನೀಡುತ್ತಿವೆ. ತಾಲೂಕಿನ ಕರೆಗುಡ್ಡ ಗ್ರಾಮ ಅತಿ ಚಿಕ್ಕ ಗ್ರಾಮವಾಗಿದ್ದರು ಕೂಡ ಶ್ರೀ ಮಹಾಂತೇಶ್ವರ ಮಠದ ಮೂಲಕ ಗುರುತಿಸಿಕೊಂಡಿದೆ ಶ್ರೀ ಮಹಾಂತೇಶ್ವರ ಮಠ ಹಾಗೂ ಶಾಖಾ ಮಠ ಹಿರೇಕೋಟ್ನೆಕಲ್ ಅಭಿವೃದ್ದಿಗೆ ಹಾಗೂ ಭಕ್ತರ ಸೌಕರ್ಯಕ್ಕಾಗಿ ಶಾಸಕರ ಅನುದಾನ ಹಾಗೂ ನನ್ನ ಅನುದಾನವನ್ನು ಸೇರಿಸಿ 50 ಲಕ್ಷ ವೆಚ್ಚದಲ್ಲಿ ವಿವಿಧ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಒಳಬಳ್ಳಾರಿ ಸುವರ್ಣಗಿರಿ ವಿರಕ್ತಮಠದ ಶ್ರೀಸಿದ್ದಲಿಂಗ ಮಹಾಸ್ವಾಮಿಗಳು ಆರ್ಶೀವಾಚನವನ್ನು ನೀಡಿ ಜಗನ್ಮಾತೆ ಜಾಗೃತವಾಗಿ ನೆಲೆಸಿರುವ ಪುಣ್ಯಕ್ಷೇತ್ರವಾಗಿದೆ 50 ವರ್ಷದ ಕೆಳಗೆ ಶ್ರೀಚನ್ನಬಸವ ಮಹಾಸ್ವಾಮಿಗಳು ಕರೆಗುಡ್ಡ ಮಠಕ್ಕೆ ಪಾದವನ್ನು ಇಟ್ಟು ಭಕ್ತರನ್ನು ಉದ್ದರಮಾಡಿ ಪಾವನ ಮಾಡಿದ ಪುಣ್ಯಕ್ಷೇತ್ರದಲ್ಲಿ ಮಾತೆಯರಿಗೆ ಉಡಿತುಂಬುವ ಕಾರ್ಯಕ್ರಮದ ಮೂಲಕ ಶ್ರೀಜಗನ್ಮಾತೆಗೆ ಸಂಕೇತಿಕವಾಗಿ ಅರ್ಪಿಸಲಾಗಿದೆ ಭಕ್ತರ ಸಹಕಾರದಿಂದ ಶ್ರೀಮಠ ಮತ್ತಷ್ಟು ಅಭಿವೃದ್ದಿಯಾಗಬೇಕು ಎಂದು ತಿಳಿಸಿದರು.

ಶಾಸಕ ಹಂಪಯ್ಯನಾಯಕ ಮಾತನಾಡಿದರು. ಕಾರ್ಯಕ್ರಮದಲ್ಲಿ 5 ಸಾವಿರದ ಒಂದು ಸುಮಂಗಲಿಯರಿಗೆ ಶ್ರೀಮಠದಿಂದ ಉಡಿತುಂಬಲಾಯಿತು. ,ನೂತನ ಎರಡು (2ನೇಪುಟಕ್ಕೆ)

## ಕ್ಯಾನ್ಸರ್‌ಗೆ ರಾಯಚೂರಿನ ಓಪೇಕ್ ಆಸ್ಪತ್ರೆಯಲ್ಲಿ ಕೀಮೋಥೇರಫಿ ಡೇ ಕೆರ್ ಚಿಕಿತ್ಸೆ ಲಭ್ಯ: ಡಿಎಚ್‌ಓ ಡಾ.ಸುರೇಂದ್ರ ಬಾಬು

**ಯುವ ಮಾರ್ಗ ಸುದ್ದಿ**



**ರಾಯಚೂರು,ನ.7–**ಕ್ಯಾನ್ಸರ್ ರೋಗ ತಡೆಗೆ ಸಂಬಂಧಿಸಿದಂತೆ ರಾಯಚೂರಿನ ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೇಕ್) ಆಸ್ಪತ್ರೆಯಲ್ಲಿ ಕೀಮೋಥೇರಫಿ ಡೇ ಕೆರ್ ಚಿಕಿತ್ಸೆ ಲಭ್ಯವಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾದಿಕಾರಿ ಡಾ ಸುರೇಂದ್ರಬಾಬು ತಿಳಿಸಿದರು.

ವಿಶ್ವ ಕ್ಯಾನ್ಸ್ ದಿನಾಚರಣೆಯ ಅಂಗವಾಗಿ ನವೆಂಬರ್ 7ರಂದು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಮನುಷ್ಯನಿಗೆ ಕಂಡು ಬರುವ ಖಾಯಿಲೆಗಳಲ್ಲಿ ಭಯ ಹುಟ್ಟಿಸುವ ಕಾನ್ಸರ್ ( ಅರ್ಬುದ ಖಾಯಿಲೆ ) ರೋಗವು ಕ್ರಮವಿಲ್ಲದ ಜೀವನ ಶೈಲಿ, ಬೆಳೆಗಳಿಗೆ ಅತಿಯಾದ ರಾಸಾಯನಿಕಗಳ ಬಳಕೆ, ಸೂಕ್ತವಲ್ಲದ ದೈನಂದಿನ ಆಹಾರ ಪದ್ದತಿ, ವೈಯಕ್ತಿಕ ಅಶುಚಿತ್ವ, ತಂಬಾಕು ಉತ್ಪನ್ನಗಳ ಬಳಕೆ, ಬೀಡಿ ಸಿಗರೇಟ್ ಬಳಕೆಗಳಿಂದ ಉಂಟಾಗುವದನ್ನು ತಡೆಗಟ್ಟುವಿಕೆಗಾಗಿ ಆರಂಭಿಕ ಪತ್ತೆಗಾಗಿ ನಿಯಮಿತ ಪರೀಕ್ಷೆ ಮಾಡಿಸಿಕೊಳ್ಳಲು ಜನತೆಯು ಮುಂದೆ ಬರಬೇಕು.

ಕ್ಯಾನ್ಸರ್‌ನ ವಿವಿಧ ರೂಪಗಳು, ಅಪಾಯ ಕಾರಿ ಅಂಶಗಳು ಮತ್ತು ತಡೆಗಟ್ಟುವಿಕೆ ಬಗ್ಗೆ ಜನರಿಗೆ ಮಾಹಿತಿ ನೀಡಲು ಡಾ.ಗಣೇಶ್ ಜಿಲ್ಲಾ ಸರ್ವೆಕ್ಷಣಾಧಿಕಾರಿಯವರ ನೇತೃತ್ವದ ಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳ ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ಶಿಬಿರಗಳನ್ನು ಏರ್ಪಡಿಸಿ ತಪಾಸಣೆ, ಜಾಗೃತಿಯನ್ನು ನೀಡುವ ಜೊತೆಗೆ ಕ್ಯಾನ್ಸರ್ ಶಂಕೀತರನ್ನು ಮೇಲ್ಮಟ್ಟದ ಆಸ್ಪತ್ರೆಗೆ ಕಳುಹಿಸಿ ಕೊಡಲಾಗುತ್ತಿದೆ. ರೋಗದ ಲಕ್ಷಣಗಳನ್ನು ಮೊದಲೇ ಪತ್ತೆ ಹಚ್ಚುವುದರಿಂದ ಸೂಕ್ತ ಚಿಕಿತ್ಸೆಯ ಮೂಲಕ ರೋಗಿಯನ್ನು ಸಂಪೂರ್ಣ ಗುಣಮು ಖರಾಗಿಸಲು ಸಾಧ್ಯವಿದೆ ಎಂದು ತಿಳಿಸಿದರು.

**ಓಪೆಕ್ ಆಸ್ಪತ್ರೆಯಲ್ಲಿ ಕೇಂದ್ರ ಆರಂಭ:** ಕರ್ನಾಟಕ ಸರಕಾರದ ಮಾರ್ಗಸೂಚಿಗಳನ್ವಯ ಈಗಾಗಲೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಡಿ ಜಿಲ್ಲಾಡಳಿತ ಮೂಲಕ ರಾಯಚೂರ ನಗರದಲ್ಲಿರುವ ಓಪೇಕ್ ಆಸ್ಪತ್ರೆಯಲ್ಲಿ ಡೆ ಕೆರ್ ಕೀಮೊಥೇರಫಿ ಕೇಂದ್ರ ಆರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲು ವಿನಂತಿಸಿದರು. ಮುಂದಿನ ದಿನಗಳಲ್ಲಿ ಸಿಂಧನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಗಾಗಿ "ಸ್ಟೋಕ್ ಕೇಂದ್ರ" ವನ್ನು ಆರಂಭಿಸಲಾಗುವುದು ಎಂದು ಅವರು ತಿಳಿಸಿದರು.

## ನ.13 ಕ್ಕೆ ಉಚಿತ ಆರೋಗ್ಯ ತಪಾಸಣೆ ಶಿಬಿರ : ಆನಂದ

**ಯುವ ಮಾರ್ಗ ಸುದ್ದಿ**




**ಲಿಂಗಸುಗೂರು,ನ.7–**ಅರವಿಂದ ಆಯುರ್ವೇದ ಸೇವಾಶ್ರಮ(ರಿ), ದಿ. ಡಾ.ರವಿಕುಮಾರ ಡಿ.ದೇರೂರು ನರಕಲದಿನ್ನಿ ಹುಟ್ಟುಹಬ್ಬದ ನಿಮಿತ್ಯ ನ.13 ಗುರುವಾರದಂದು ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತ ಔಷಧಿ ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಎಂದು ಕಲ್ಯಾಣ ಕರ್ನಾಟಕ ಪಾರಂಪರಿಕ ವೈದ್ಯ ಪರಿಷತ್ ಅಧ್ಯಕ್ಷ ವೈದ್ಯ ಆನಂದ ಡಿ.ಹೇರೂರು ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗಸುಗೂರು ಪಟ್ಟಣದ ಬಸವಸಾಗರ ಕ್ರಾಸ್ ಬಳಿ ಇರುವ ಧನ್ವಂತರಿ ನಿವಾಸದ ಹತ್ತಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನ.13 ಬೆಳಗ್ಗೆ 10-30ರಿಂದ ಶಿಬಿರ ನಡೆಯುತ್ತದೆ. ಡಾ.ನಿರ್ಮಲಾ ವಿ.ಕನ್ನಾಳ, ಡಾ.ಅಕ್ಷಯಕುಮಾರ ದೇರೂರು ನೇತೃತ್ವದಲ್ಲಿ ಹಲ್ಲು ನೋವು, ಮುಖದ ಕರೆ ಭಂಗು, ಅಸ್ತಮಾ, ಮೂಲವ್ಯಾಧಿ, ಮೊಣಕಾಲುನೋವು (ಕೀಲುನೋವು), ಅಲರ್ಜಿ, ಗ್ಯಾಸ್ಟ್ರಿಕ್, ಕಣ್ಣಿನ ತೊಂದರೆಗೆ ಶಿಬಿರದಲ್ಲಿ ತಜ್ಞ ವೈದ್ಯರಿಂದ 87 9901068774, 8660670737, 6364334677, 8497009780 ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಕೋರಿದರು.ಈ ಸಂದರ್ಭದಲ್ಲಿ ವೈದ್ಯ ರಾಘವೇಂದ್ರ, ವೈದ್ಯ ಗಣೇಶ ಸೇರಿದಂತೆ ಇದ್ದರು.

## ರಾಯಚೂರು ಜಿಲ್ಲೆಯಲ್ಲಿ ತಂಬಾಕು ಮುಕ್ತ ಯುವ ಅಭಿಯಾನ 3.0 ಶಿಸ್ತುಬದ್ಧ ನಡೆಯಲಿ: ಜಿಲ್ಲಾಧಿಕಾರಿ ನಿತೀಶ್ ಕೆ. ಸೂಚನೆ

**ಯುವ ಮಾರ್ಗ ಸುದ್ದಿ**



**ರಾಯಚೂರು,ನ.7–**ತಂಬಾಕು ಮುಕ್ತ ಸಮಾಜ ನಿರ್ಮಾಣ ಗುರಿ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಆರೋಗ್ಯ ಅಭಿಯಾನ ನೀಡಿದ ಮಾರ್ಗಸೂಚಿಯಂತೆ ರಾಯಚೂರು ಜಿಲ್ಲೆಯಲ್ಲಿ ತಂಬಾಕು ಮುಕ್ತ ಯುವ ಅಭಿಯಾನ 3.0 ಅಚ್ಚುಕಟ್ಟಾಗಿ ನಡೆಯಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಆರೋಗ್ಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಗುರುವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಜಿಲ್ಲಾ ತಂಬಾಕು ನಿಯಂತ್ರಣ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಂಬಾಕಿನ ಹಾನಿಕಾರಕ ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಜಿಲ್ಲೆಯಲ್ಲಿ ಕನಿಷ್ಠ 30 ಗ್ರಾಮಗಳನ್ನು ತಂಬಾಕು ಮುಕ್ತ ಗ್ರಾಮವನ್ನಾಗಿ ಘೋಷಿಸಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ ಅಭಿಯಾನದಲ್ಲಿ ಯುವಕರನ್ನು ತಂಬಾಕಿನ ಹಸ್ತಕ್ಷೇಪದಿಂದ ರಕ್ಷಿಸಲು ಸಾಮಾಜಿಕ ಮಾಧ್ಯಮದ ಮೂಲಕ ಅರಿವು ಮೂಡಿಸಬೇಕು.

ತಂಬಾಕು ನಿಯಂತ್ರಣ ಕಾರ್ಯಕ್ರಮದ ಬಗ್ಗೆ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಅರಿವು ಮೂಡಿಸಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಜಿಲ್ಲೆಯಲ್ಲಿ ಕನಿಷ್ಠ 30 ಐಇಸಿ ಅಭಿಯಾನ ನಡೆಸಬೇಕು.

ಶಿಕ್ಷಣ ಇಲಾಖೆಯ ಮೂಲಕ ಜಿಲ್ಲೆಯಲ್ಲಿ ಕನಿಷ್ಠ 400 ಶಾಲಾ, ಕಾಲೇಜುಗಳನ್ನು ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆಯಾಗಿ ಘೋಷಿಸಿಲು ಕ್ರಮಕೈಗೊಳ್ಳಬೇಕು. ಇತರ ಇಲಾಖೆಯ ಹಾಗೂ ಸರ್ಕಾರೇತರ ಸಂಸ್ಥೆಯ ಸಹಯೋಗದೊಂದಿಗೆ ವಿವಿಧ ಚಟುವಟಿಕೆಗಳನ್ನು ನಡೆಸಬೇಕು.

ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾ ತಂಬಾಕು ನಿಯಂತ್ರಣ ಸಮನ್ವಯ ಸಭೆಗಳು ನಿಯಮಿತವಾಗಿ ನಡೆಯುವಂತೆ ಕ್ರಮವಹಿಸಬೇಕು. ಜಿಲ್ಲಾ ಕ್ರಿಯಾ ಯೋಜನೆಯನ್ನು ರೂಪಿಸಿ ಅಭಿಯಾನ ನಡೆಸಬೇಕು. ಚಟುವಟಿಕೆಗಳ ಅನುಷ್ಠಾನ ವರದಿಯನ್ನು (2ನೇಪುಟಕ್ಕೆ...)

## ಸಿಟಿ ಫಾರ್ ಯುತ್, ಯುತ್ ಫಾರ್ ಸಿಟಿ ಅಭಿಯಾನದಡಿ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಶಿಬಿರ: ಜುಬಿನ್ ಮೊಹಪಾತ್ರ

**ಯುವ ಮಾರ್ಗ ಸುದ್ದಿ**



**ರಾಯಚೂರು,ನ.7–**"ಸಿಟಿ ಫಾರ್ ಯುತ್, ಯುತ್ ಫಾರ್ ಸಿಟಿ" ಅಭಿಯಾನದಡಿ ರಾಯಚೂರು ಮಹಾನಗರ ಪಾಲಿಕೆಯು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡ ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವಭಾವಿ ತರಬೇತಿ ಶಿಬಿರದಲ್ಲಿ ವಿದ್ಯಾರ್ಥಿಗಳು ಸಕ್ರಿಯ ಭಾಗಿಯಾಗಬೇಕು ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದ್ದಾರೆ.

ವಿದ್ಯಾರ್ಥಿ-ಯುವಜನರು ಈ ದೇಶದ ಬಹುದೊಡ್ಡ ಸಂಪತ್ತು. ಸಕಾಲಕ್ಕೆ ಮಾರ್ಗದರ್ಶನ ಸಿಗದೇ ಇದ್ದಲ್ಲಿ ಯುವಜನತೆ ದಾರಿ ತಪ್ಪುವ ಸಾಧ್ಯತೆ ಹೆಚ್ಚಿರುತ್ತದೆ. ಇದನ್ನರಿತು ರಾಯಚೂರು ಮಹಾನಗರ ಪಾಲಿಕೆಯು "ಸಿಟಿ ಫಾರ್ ಯುತ್, ಯುತ್ ಫಾರ್ ಸಿಟಿ" ಅಭಿಯಾನದಡಿ ಯುವಜನರಿಗೆ ಉತ್ತಮ ಮಾರ್ಗದರ್ಶನದ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಈ ಅಭಿಯಾನದ ಮುಂದುವರೆದ ಭಾಗವಾಗಿ ಈಗ ಈ ಶಿಬಿರ ಆಯೋಜನೆ ಮಾಡಿದ್ದೇವೆ.

ಈ ಭಾಗದ ವಿದ್ಯಾರ್ಥಿಗಳು ದೂರದ ಬೆಂಗಳೂರು, ಮಂಗಳೂರ, ಧಾರವಾಡ, ವಿಜಯಪುರ, ಮೈಸೂರ ಸೇರಿದಂತೆ ಅನೇಕ ಕಡೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ತೆರಳುತ್ತಾರೆ. ಇದರಿಂದ ಅವರಿಗೆ ಆರ್ಥಿಕ ಹೊರೆಯಾಗುತ್ತದೆ. ಇದನ್ನು ತಪ್ಪಿಸಲು ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ರಾಯಚೂರು ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಈ ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವಭಾವಿ ಉಚಿತ ತರಬೇತಿ ಶಿಬಿರ ಆಯೋಜನೆ ಮಾಡಿದ್ದೇವೆ. ರಾಯಚೂರಲ್ಲಿ 30 ದಿನ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಶಿಬಿರಕ್ಕೆ ಹೆಸರು ನೋಂದಣಿಗೆ ನವೆಂಬರ್ 8 ಕೊನೆಯ ದಿನವಾಗಿದ್ದು, ಆಸಕ್ತರು ಬೇಗನೇ ಹೆಸರು ನೋಂದಣಿ ಮಾಡಬೇಕು. ಐಎಎಸ್, ಐಪಿಎಸ್, ಐಆರ್‌ಎಸ್, ಕೆಎಎಸ್ ಪರೀಕ್ಷೆಗಳು ಜೊತೆಗೆ ಎಫಡಿಎ, ಎಸ್ ಡಿಎ, ಪೊಲೀಸ್, ಪಿಡಿಓ ಸೇರಿದಂತೆ ಅನೇಕ ಬಗೆಯ ಸ್ಪರ್ಧಾತ್ಮಕ ಪರೀಕ್ಷೆ ಪಾಸು ಮಾಡುವ ಕನಸು ನನಸು ಮಾಡಿಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ನವೆಂಬರ್ 12ರಂದು ಮಧ್ಯಾಹ್ನ 3 ರಿಂದ 4.30ರವರೆಗೆ ರಾಯಚೂರಿನ ಜಿಲ್ಲಾ ರಂಗಮಂದಿರ ಹತ್ತಿರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯುವ ಅರ್ಹತಾ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆಯುವ ಮೊದಲ 100 ಅಭ್ಯರ್ಥಿಗಳಿಗೆ ಉಚಿತ ತರಬೇತಿಗೆ ಅವಕಾಶ ನೀಡಲಾಗುತ್ತದೆ.

ಪಿಯುಸಿ ಪಾಸಾದ ಹಾಗೂ ಪದವಿ ಓದುತ್ತಿರುವ ಅಥವಾ ಪದವಿ ಪೂರ್ಣಗೊಳಿಸಿದ ರಾಯಚೂರ (2ನೇಪುಟಕ್ಕೆ)

ಯುವ ಮಾರ್ಗ

ಶನಿವಾರ: 08–11–2025

# ಮೊದಲನೇಯ ಪುಟದಿಂದ

## ರಾಯಚೂರು ಜಿಲ್ಲೆಯಲ್ಲಿ ತಂಬಾಕು ಮುಕ್ತ ಯುವ ಅಭಿಯಾನ 3.0 ಶಿಸ್ತುಬದ್ಧ ನಡೆಯಲಿ: ಜಿಲ್ಲಾಧಿಕಾರಿ ನಿತೀಶ್ ಕೆ. ಸೂಚನೆ

ಸಂಬಂಧಪಟ್ಟ ಇಲಾಖೆಯವರು ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ತಂಬಾಕು ಮುಕ್ತ ಯುವ ಅಭಿಯಾನ– 3.0 ಚಟುವಟಿಕೆಗಳನ್ನು ಜಿಲ್ಲೆಯಲ್ಲಿ ಸರಿಯಾಗಿ ನಡೆಸಿ ವರದಿಯನ್ನು ರಾಜ್ಯ ಮಟ್ಟಕ್ಕೆ ನಿಗದಿತ ಎಮ್ಐಎಸ್ ಪೋರ್ಟಲ್ ಮೂಲಕ ನೀಡಬೇಕು. ತಂಬಾಕು ಮುಕ್ತ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಈ ಅಭಿಯಾನಕ್ಕೆ ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ವಾರ್ತಾ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಹಕಾರ ನೀಡಬೇಕೆಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಪ್ರಕಟಣೆಗಳ ಬಿಡುಗಡೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಪ್ರಕಟಿಸಿದ ಜನಜಾಗೃತಿ ಪ್ರಕಟಣೆಗಳನ್ನು ಇದೆ ವೇಳೆ ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರಬಾಬು, ಜಿಲ್ಲಾ ಆರ್ ಸಿಎಚ್ ಅಧಿಕಾರಿ ಡಾ.ನಂದಿತಾ ಎನ್ ಎಮ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಗಣೇಶ ಕೆ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ.ಈಶ್ವರ್ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ವಾರ್ತಾ ಇಲಾಖೆಯ ವಾರ್ತಾ ಸಹಾಯಕರಾದ ಗವಿಸಿದ್ದಪ್ಪ ಹೊಸಮನಿ, ತಂಬಾಕು ನಿಯಂತ್ರಣ ಕಾರ್ಯಕ್ರಮದ ಸಿಬ್ಬಂದಿ ಪ್ರಿಯಾಂಕ ರೇವಣಕರ, ಯಂಕೋಬಾ ಸರ್ಜಾಪುರ, ಅಣ್ಣಪೂರ್ಣಬಾಯಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

## ಸಿಟಿ ಫಾರ್ ಯುತ್, ಯುತ್ ಫಾರ್ ಸಿಟಿ ಅಭಿಯಾನದಡಿ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಶಿಬಿರ: ಜುಬಿನ್ ಮೊಹಪಾತ್ರ

ಸೇರಿದಂತೆ ರಾಜ್ಯದ ಯಾವುದೇ ಭಾಗದ ಆಸಕ್ತ ವಿದ್ಯಾರ್ಥಿಗಳು ಕ್ಯುಆರ್ ಕೋಡ್ ಬಳಸಿ ಹೆಸರು ನೋಂದಣಿ ಮಾಡಬಹುದಾಗಿದೆ. ಈ ತರಬೇತಿಗೆ ಯಾವುದೇ ಪ್ರವೇಶಾತಿ ಮತ್ತು ತರಬೇತಿ ಶುಲ್ಕ ಇರುವುದಿಲ್ಲ. ಇನ್ನೀತರ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ರಂಗಮಂದಿರ ಹಿಂದುಗಡೆಯ ಜಿಲ್ಲಾ ಗ್ರಂಥಾಲಯದ ಕಚೇರಿಯನ್ನು ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ತಿಳಿಸಿದ್ದಾರೆ.

## ಶ್ರೀಮಹಾಂತೇಶ್ವರ ಮಠದಲ್ಲಿ 5 ಸಾವಿರದ ಒಂದು ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮ

ಗೋಪುರಗಳ ಲೋಕಾರ್ಪಣೆ, ಕಳಸರೋಹಣವನ್ನು ನೆರವೇರಿಸಲಾಯಿತು. ಹಿರಿಯ ಸಾಹಿತಿ ರಮೇಶಬಾಬು ಯಾಳಗಿ ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕರೆಗುಡ್ಡ ಶ್ರೀ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,ಯದ್ದಲದೊಡ್ಡಿಯ ಮಹಾಲಿಂಗ ಮಹಾಸ್ವಾಮಿಗಳು, ಕಿರಿಯ ಶ್ರೀಗಳಾದ ಸಂಗನಬಸವ ಮಾಹಾಸ್ವಾಮಿಗಳು, ಒಳಬಳ್ಳಾರಿ ಸುವರ್ಣಗಿರಿ ವಿರಕ್ತಮಠದ ಕಿರಿಯ ಶ್ರೀಗಳಾದ ಬಸವಲಿಂಗ ಮಹಾಸ್ವಾಮಿಗಳು, ಅಡವಿ ಅಮರೇಶ್ವರ ಸುಕ್ಷೇತ್ರದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು, ಮೈಸೂರಿನ ನಿರಂಜನದೇವರು, ದರೂರು ಸಂಗನಬಸವೇಶ್ವರ ಮಠದ ಶ್ರೀ ಕೊಟ್ಟೂರು ಮಹಾಸ್ವಾಮಿಗಳು,ಅದೋನಿ ಗುರುಸಿದ್ದದೇವರು, ಮಾಜಿ ಕೇಂದ್ರ ಸಚಿವರಾದ ಬಸವರಾಜ ಪಾಟೀಲ್ ಅನ್ವರಿ, ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ,ರೈತ ಮುಖಂಡರಾದ ಹನುಮನಗೌಡ ಬೆಳಗುರ್ಕಿ, ತಿಮ್ಮರೆಡ್ಡಿ ಭೋಗವತಿ ,ದೊಡಬಸಪ್ಪಗೌಡ ಭೊಗವತಿ,ಅಲ್ದಾಳ ವೀರಭದ್ರಪ್ಪ,ಶರಣಯ್ಯನಾಯಕ ಗುಡದಿನ್ನಿ,ರುದ್ರಪ್ಪಗೌಡ ಅಂಗಡಿ,ಶಿವಮೂರ್ತಿ,ಖಾಲೀದ್ ಖಾದ್ರಿ,ರಾಜಾ ಸುಭಾಷ್ಚಂದ್ರನಾಯಕ ,ಲಕ್ಷ್ಮಿ ??ೀದೇವಿನಾಯಕ,ಶರಣಪ್ಪಗೌಡ ನಕ್ಕುಂದಿ,ಮಲ್ಲನಗೌಡ ನಕ್ಕುಂದಿ, ಅಮರೇಗೌಡ ಕರ್ಲಕುಂಟಿ, ಸೇರಿದಂತೆ. ನಾಡಿನ ವಿವಿಧ ಮಠಗಳ ಶ್ರೀಗಳು ಹಾಗೂ ಸೇರಿದಂತೆ ಗ್ರಾಮದ ಮುಖಂಡರು,ಸಾವಿರಾರು ಶ್ರೀ ಮಠದ ಭಕ್ತರು ಭಾಗವಹಿಸಿದರು.

## ಸಕ್ಕರೆ ಕಾರ್ಖಾನೆಗಳ ಸಮಸ್ಯೆ ಕೇಳಿ ಸಿಎಂ ಸಿದ್ದರಾಮಯ್ಯ ಸುಸ್ತು..!

ಎತ್ತಿಯೂ ಪ್ರಯೋಜನ ಆಗುತ್ತಿಲ್ಲ. ಒಂದು ಎಕರೆಯೂ ಕಬ್ಬು ಬೆಳೆಯದ ಕೆಲವು ರೈತರು ಕಾರ್ಖಾನೆ ಮಾಲೀಕರ ಬಗ್ಗೆ ಆಡುತ್ತಿರುವ ಮಾತುಗಳು ಕೇಳಿದರೆ, ನಾವು ಕಾರ್ಖಾನೆ ಮಾಡಿ ಏನು ಪಾಪ ಮಾಡಿದ್ದೀವೋ ಅನ್ನಿಸುತ್ತದೆ ಎಂಬ ಅಭಿಪ್ರಾಯವನ್ನು ಸಕ್ಕರೆ ಕಾರ್ಖಾನೆಗಳ ಮಾಲೀಕರು ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕಬ್ಬು ಬೆಳೆಗಾರರ ಕಣ್ಣಿ?ರು ಒರೆಸಲು ಸಾಲ ಮಾಡಿ, ಬ್ಯಾಂಕ್ ಬೆನ್ನು ಬಿದ್ದು ಕಾರ್ಖಾನೆ ಮಾಡಿದ್ದೇವೆ. ಆದರೆ, ರೈತರ ಹೆಸರಲ್ಲಿ ಕೆಲವರ ಬಾಯಲ್ಲಿ ಬರುತ್ತಿರುವ ಮಾತುಗಳು ನೋವುಂಟು ಮಾಡಿವೆ. ನಮನ್ನು ದರೋಡೆಕೋರರು ಎನ್ನುತ್ತಿದ್ದಾರೆ. ಇದೆಲ್ಲಾ ಸಾಕಾಗಿದೆ. ನಷ್ಟದಲ್ಲಿ ನಾವು ಕಾರ್ಖಾನೆ ನಡೆಸಬೇಕು ಎಂದರೆ, ಸಕ್ಕರೆ ಕಾರ್ಖಾನೆಗಳನ್ನೆ? ಬಿಟ್ಟು ಕೊಡುತ್ತೆ?ವೆ. ಸರ್ಕಾರವೇ ನಡೆಸಲಿ ಅಥವಾ ಬೇರೆ ಯಾರಾದರೂ ನಡೆಸಲಿ ಎಂದು ಮಾಲೀಕರು ಹೇಳಿದ್ದಾರೆ ಎನ್ನಲಾಗಿದೆ.

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆ ನಡೆಸುವುದು ಬಹಳ ಕಷ್ಟವಾಗುತ್ತಿದೆ. ಮಹಾರಾಷ್ಟ್ರದ ಕಬ್ಬಿನಲ್ಲಿ ರಿಕವರಿ ಪ್ರಮಾಣ ಶೇ.14 ರಷ್ಟಿದೆ. ಅವರಿಗೆ ಹೋಲಿಸಿ ಇಲ್ಲಿನವರು ಅದೇ ಹಣ ಕೇಳುತ್ತಾರೆ. ಆದರೆ ಇಲ್ಲಿನ ಕಬ್ಬಿನಿಂದ ಸಿಗುವ ರಿಕವರಿ ಪ್ರಮಾಣ ಕಡಿಮೆ ಇದೆ. ಸಕ್ಕರೆ ಕಾರ್ಖಾನೆ ಮಾಲೀಕರು, ಕಾರ್ಮಿಕರ ಸವಲತ್ತು ಮತ್ತು ಸಂಬಳ ಇತ್ಯಾದಿ ನೋಡಿಕೊಳ್ಳಬೇಕು. ರೈತರ ಬೇಡಿಕೆಗಳನ್ನೂ ನೋಡಬೇಕು. ಸಕ್ಕರೆ ಕಾರ್ಖಾನೆಗಳು ಸಕ್ಕರೆ, ವಿದ್ಯುತ್, ಎಥೆನಾಲ್ ಉತ್ಪಾದನೆ ಮಾಡಿದರೂ ನಿರಂತರ ನಷ್ಟದಲ್ಲಿವೆ ಎಂಬ ಸಮಸ್ಯೆಗಳನ್ನು ಗಮನಕ್ಕೆ ಸಭೆಯ ಗಮನಕ್ಕೆ ತಂದಿದ್ದಾರೆ ಎಂದು ತಿಳಿದು ಬಂದಿದೆ.

## ಮಲ್ಲೇದೇವರಗುಡ್ಡ ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ಕನ್ನಡಸೇನೆ ಕರ್ನಾಟಕ ಅರಕೇರಾ ತಾಲೂಕ ಘಟಕದ ವತಿಯಿಂದ ಮನವಿ



ಯುವ ಮಾರ್ಗ ಸುದ್ದಿ

**ಅರಕೇರಾ,ನ.7–** ತಾಲೂಕಿನ ಮಲ್ಲೇದೇವರಗುಡ್ಡ ಗ್ರಾಮದಲ್ಲಿರುವ 63 ಕೆ.ವಿ ಸಾಮಾರ್ಥ್ಯದ ವಿದ್ಯುತ ಪರಿವರ್ತಕವಿದ್ದು ಗ್ರಾಮದಲ್ಲಿ ವರ್ಷದಿಂದ ವರ್ಷಕ್ಕೆ ಜನಸಂಖ್ಯೆ ಮತ್ತು ಕುಟುಂಬಗಳು ಹೆಚ್ಚಾದಂತೆ ವಿದ್ಯುತ್ ಬಳಕೆದಾರರೂ ಹೆಚ್ಚಾಗಿರುತ್ತಾರೆ ಕಾರಣ 100 ಕೆ.ವಿ ಸಾಮಾರ್ಥ್ಯದ ಪರಿವರ್ತಕವನ್ನು ಅಳವಡಿಸಿಕೊಡಬೇಕೆಂದು ಕನ್ನಡಸೇನೆ ಕರ್ನಾಟಕ ಅರಕೇರಾ ತಾಲೂಕ ಘಟಕದ ಪದಾಧಿಕಾರಿಗಳು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಜೆಸ್ಕಾಂ ಕಚೇರಿ ದೇವದುರ್ಗ ಇವರಿಗೆ ಮನವಿ ಪತ್ರ ನೀಡಿ ಮನವಿಮಾಡಿಕೊಂಡರು.

ಮಲ್ಲೇದೇವರಗುಡ್ಡ ಗ್ರಾಮದಲ್ಲಿರುವ 63 ಕೆ.ವಿ ಸಾಮಾರ್ಥ್ಯದ ವಿದ್ಯುತ ಪರಿವರ್ತಕವಿದ್ದು ಅದು ಸಾಲುತ್ತಿಲ್ಲ ಮೇಲಿಂದ ಮೇಲೆ ದುರಸ್ತಿ ಬರುತ್ತಿದ್ದು ದುರಸ್ತಿ ಮಾಡಿದಂತೆಲ್ಲ ಸುಟ್ಟು ಹೋಗುತ್ತಿದೆ ಸದರಿ ಗ್ರಾಮಕ್ಕೆ ಹೆಚ್ಚುವರಿಯಾಘಿ ಇನ್ನೊಂದು 63 ಕೆ.ವಿ ಸಾಮಾರ್ಥ್ಯದ ವಿದ್ಯುತ್ ಪರಿವರ್ತಕವನ್ನು ನೀಡಬೇಕು.

ಅಲ್ಲದೇ ಗ್ರಾಮ ಪಂಚಾಯತಿ ವ್ಯಾಪ್ತಿಯ ರೈತರ ಕೃಷಿ ಜಮೀನುಗಳಿಗೆ ವಿದ್ಯುತ ಪರೈಕೆ ಮಾಡುವ 100 ಕೆ.ವಿ ಸಾಮಾರ್ಥ್ಯ ವಿದ್ಯುತ್ ಪರಿವರ್ತಕ ಸುಮಾರು ಎರಡುವರ್ಷಗಳ ಹಿಂದೆ ಸುಟ್ಟು ಹೋಗಿದೆ.ಇದನ್ನು ಇದುವರಿಗೂ ದುರಸ್ತಿ ಮಾಡಿರುವುದಿಲ್ಲ.ಇದರಿಂದ ರೈತರು ತಮ್ಮ ಜಮ್ಮೀನುಗಳಿಗೆ ನೀರು ಬಿಟ್ಟುಕೊಳ್ಳಲು ತುಂಬಾ ತೊಂದರೆಯಾಗಿದೆ.ಸದರಿ ವಿದ್ಯುತ್ ಪರಿವರ್ತಕ ಅವಲಂಬಿತ ಜಮ್ಮೀನುಗಳಿಗೆ ಕೃಷಿ ಚಟುವಟಿಕೆ ನಡೆಸಲು ತುರ್ತು ವಿದ್ಯುತ್ ಪರಿವರ್ತಕ ದುರಸ್ತಿಮಾಡಿಕೊಡಬೇಕೆಂದು ಮನವಿ ಪತ್ರದಲ್ಲಿ ವಿನಂತಿಸಿದ್ದಾರೆ.

ಒಂದುವೇಳೆ ನಮ್ಮ ಬೇಡಿಕೆಗಳನ್ನು ತುರ್ತು ಈಡೇರಿಸಿ ಜನರಿಗೆ ರೈತರಿಗೆ ಗ್ರಾಮಸ್ಥರಿಗೆ ಅನುಕೂಲಮಾಡಿಕೊಡದಿದ್ದಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಸಂದರ್ಭದಲ್ಲಿ ಮೈಹಿಬೂಬ ಬಡಿಗೇರಾ ತಾಲೂಕ ಅಧ್ಯಕ್ಷರು ಅರಕೇರಾ ಹನುಮಂತ್ರಾಯ ಗಾಲಿ ಪ್ರಧಾನಕಾರ್ಯದರ್ಶಿ ಅಮರೇಶಗೌಡ ಖಜಾಂಜಿ ಅರಕೇರಾ ನಗರದ ಘಟಕದ ಅಧ್ಯಕ್ಷರಾದ ಶಿಮುಮಾರ ಗುಜುಪು ತಾಲೂಕ ಯುವಘಟಕದ ಅಧ್ಯಕ್ಷರಾದ ಬಸವ ಪೂಜಾರಿ

## ಸಂಸ್ಥೆಗಳ ಸಹಯೋಗದಿಂದ ಮಾನಸಿಕ ಅಸ್ವಸ್ಥರ ಸ್ಥಳಾಂತರ




**ಗುರುಮಠಕಲ್,ನ.7–** ವಿಕಲ ಚೇತನ ಸ್ನೇಹಿ ಸಂಸ್ಥೆಯಾದ ಎ ಪಿ ಡಿ ಹಾಗೂ ಮನೋವೃಕ್ಷ ಆಲದಮರ ಸಂಸ್ಥೆ ಸಹಯೋಗದೊಂದಿಗೆ ಪಟ್ಟಣದಲ್ಲಿ ಇಬ್ಬರು ಮಾನಸಿಕ ಅಸ್ವಸ್ಥರನ್ನು ಆರೈಕೆಗಾಗಿ ಯಾದಗಿರಿ ವೈಜ್ಞಾನಿಕ ಸಂಸ್ಥೆಗೆ ಸ್ಥಳಾಂತರಿಸಲಾಯಿತು. ಕಳೆದ ಹಲವು ದಿನಗಳಿಂದ ಪಟ್ಟಣದೊಳಗೆ ಅಂದಾಜು 9 ರಿಂದ10ಹತ್ತು ಜನ ಮಾನಸಿಕ ಅಸ್ವಸ್ಥರು ಇರುವುದು ಕಂಡುಬಂದಿಂದ್ದು ಅವರಿಗೆ ಸ್ಥಳಿಯವಾಗಿ ಯಾವುದೇ ಸಂಭಂದಿಕರು ಇಲ್ಲದಿರುವುದರಿಂದ ಎ ಪಿ ಡಿ ಸಂಸ್ಥೆಯು ಮನೋವೃಕ್ಷ ಆಲದಮರ ಫೌಂಡೇಶನ್ ಅವರನ್ನು ಸಂಪರ್ಕಿಸಿ ವಿಷಯವನ್ನು ತಿಳಿಸಿತ್ತು. ಎ ಪಿ ಡಿ ಮತ್ತು ಆಲದ ಮರಗಳ ಸಂಸ್ಥೆಗಳು ಜೊತೆಗೂಡಿ ಕಾರ್ಯಾಚರಣೆಯಲ್ಲಿ ಇಬ್ಬರು ಅಸ್ವಸ್ಥರನ್ನು ಜಿಲ್ಲಾ ಅಸ್ಪತ್ರೆಯ ಮಾನಸಿಕ ಚಿಕಿತ್ಸೆ ವಿಭಾಗಕ್ಕೆ ಆರೈಕೆಗಾಗಿ ಯಾದಗಿರಿ ವೈಜ್ಞಾನಿಕ ಸಂಸ್ಥೆಗೆ ಸ್ಥಳಾಂತರಿಸಲಾಯಿತು. ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ನೀಡಿ ಅವಶ್ಯಕ ಸಹಾಯ ನೀಡುವ ಮೂಲಕ ಮತ್ತೆ ಮುಖ್ಯವಾಹಿನಿಗೆ ತರುವ ಕಾರ್ಯಮಾಡಲಾಗುವುದು ಎಂದು ಆಲದ ಮರ ಫೌಂಡೇಶನ್ ಜಿಲ್ಲಾ ಸಂಯೋಜಕರಾದ ಶೇಖರ ಕಟ್ಟಿಮನಿ ತಿಳಿಸಿದರು. ಕಾರ್ಯಚರಣೆಯಲ್ಲಿ ಎ ಪಿ ಡಿ ಸಂಸ್ಥೆಯ ತಾಲೂಕು ಸಂಯೋಜಕ ವಿರುಪಾಕ್ಷ ಮಾಲಿಪಾಟೀಲ್, ವಿಕಲ ಚೇತನ ಸಹಾಯಕ ಗಂಗಪ್ಪ ಯಾದವ, ಆರೋಗ್ಯ ಸಮುದಾಯ ಕೇಂದ್ರದ ವೈದ್ಯಾಧಿಕಾರಿ ಡಾ. ಮಹೇಶ್ ಸಜ್ಜನ, ಅಂಬುಲನ್ಸ್ ಸಿಬ್ಬಂದಿ ಪವನ ಕುಮಾರ್ ಚಂದಪೂರ ಹಾಗೂ ಶ್ರೀನಿವಾಸ ಸೇರಿದಂತೆ ಗುರುಮಠಕಲ್ ಪೊಲೀಸ್ ಠಾಣೆಯ ಸಿಬ್ಬಂದಿ ಹಾಗೂ ವೈದ್ಯಕೀಯ ಸಿಬ್ಬಂದಿ ಭಾಗಿಯಾಗಿದ್ದರು.

## ಗುವಿವಿ ವಿಶ್ರಾಂತ ಪ್ರಾಧ್ಯಾಪಕರಿಂದ ದಾಸೋಹ



**ಕಲಬುರಗಿ,ನ.7–**ಸೈಯದ್ ಚಿಂಚೋಳಿ ಹತ್ತಿರ ಇರುವ ಸರ್ಕಾರಿ ಅನುದಾನಿತ ಮಹಾದೇವಿ ವಿಕಲಚೇತನರ ಮತ್ತು ವೃದ್ಧಾಶ್ರಮದ ನಿವಾಸಿಗಳಿಗೆ ಗುಲ್ಬರ್ಗ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರ ಸಂಘದಿಂದ ಹೋಳಿಗೆ ಊಟ ಔತಣ ಕೂಟ ಏರ್ಪಡಿಸಲಾಯಿತು.

ಸಂಘದ ಅಧ್ಯಕ್ಷರಾದ ಡಾ.ಕಲ್ಲಪ್ಪ ವಾಲಿ ಅವರು ಮಾತನಾಡಿ, ವಯೋವೃದ್ಧರು ಯಾವುದೋ ಕಾರಣದಿಂದ ಮನೆ ತೊರೆದು ವೃದ್ಧಾಶ್ರಮ ಸೇರುವ ಸಂದರ್ಭ ಬಂದಿರುತ್ತದೆ . ಅವರಿಗೆ ಅನಾಥ ಪ್ರಜ್ಞೆ ಕಾಡದೆ ನಾವು ನಿಮ್ಮೊಂದಿಗಿದ್ದೇವೆ ಎಂಬ ಆತ್ಮಸ್ಥೈರ್ಯ ತುಂಬುವುದು ಅತ್ಯಂತ ಅವಶ್ಯಕವಾಗಿದೆ . ಭಾರತೀಯ ಸಂಸ್ಕೃತಿಯಂತೆ ತಂದೆ ತಾಯಿಗಳನ್ನು ಮುಪ್ಪಿನ ಕಾಲದಲ್ಲಿ ಅತ್ಯಂತ ಗೌರವದಿಂದ ಮಕ್ಕಳು ಸಾಕಬೇಕು. ಆದರೂ ಅನಿವಾರ್ಯ ಕಾರಣಗಳಿಂದ ವೃದ್ಧಾಶ್ರಮ ಸೇರುವ ಪರಿಸ್ಥಿತಿ ಬಂದಿರುತ್ತದೆ. ಮಕ್ಕಳು ತಂದೆ ತಾಯಿಗಳ ಹೊಟ್ಟೆಗೆ ಅನ್ನ ಹಾಕಿದರೆ ಸಾಲದು, ಎದೆಗೆ ಪ್ರೀತಿ ಕೂಡ ಹಾಕಬೇಕು. ವಯೋವೃದ್ಧರಾಗುವುದು ಎಲ್ಲರ ಸರದಿಯಾಗಿರುತ್ತದೆ ಇದನ್ನು ಅರಿತು ವರ್ತಿಸಬೇಕು ಎಂದರು.

ಡಾ.ವೀರಣ್ಣ ದಂಡೆ ಅವರು ಮಾತನಾಡಿ, ಸಮಾಜದಲ್ಲಿ ಮಾನವೀಯ ಸಂಬಂಧಗಳು ವೃದ್ಧಿಸುವುದು ನಮ್ಮ ಸಂಘದ ಉದ್ದೇಶವಾಗಿದೆ. ನಮ್ಮ ಸಮಕಾಲಿನ ಸಮಾಜ ವೃದ್ಧರನ್ನು ಕಡೆಗಣಿಸುತ್ತಿತ್ತು ಎಂಬ ಇತಿಹಾಸ ರಚಿತವಾಗಬಾರದು. ಈ ರೀತಿಯ ವೃದ್ಧಾಶ್ರಮ ಅನಾಥಾಶ್ರಮಗಳಿಗೆ ನಾವು ದಾಸೋಹ ಸೇವೆ ಮಾಡುತ್ತೇವೆ ಎಂದರು

ಸಂಘದ ಸದಸ್ಯರಾದ ಎಸ್.ಆರ್.ಮುಳ್ಳೂರ್, ಡಾ.ಜಿ.ಆರ್. ನಾಯಕ, ಡಾ.ಆರ್.ಎಸ್.ಕುಲಕರ್ಣಿ, ಡಾ.ಪ್ರತಾಪಕುಮಾರ ಜಾಡಾ ಸೇರಿದಂತ ಮತ್ತಿತರರು ಉಪಸ್ಥಿತರಿದ್ದರು.

## ಹಗಲು ರಾತ್ರಿ ಧರಣಿ ಆರಂಭಿಸಿದ ಕುದುರಿ ಸಾಲವಾಡಿಗಿ ನಿರಾಶ್ರಿತರು



**ಬಸವನ ಬಾಗೇವಾಡಿ,ನ.7–**ತಾಲೂಕಿನ ಕುದುರಿ ಸಾಲವಾಡಗಿಯ ಗ್ರಾಮದಲ್ಲಿ ರಸ್ತೆ ಅಗಲೀಕರಣ ಮಾಡುವ ನೆಪದಲ್ಲಿ ಕಾನೂನು ಬಾಹಿರವಾಗಿ ನೂರಾರು ಬಡವರ ಮನೆಗಳನ್ನು ಕೆಡವಲಾಗಿದೆ ಎಂದು ಆರೋಪಿಸಿ ಕಳೆದು 23 ದಿನಗಳಿಂದ ನಿರಾಶ್ರಿತರು, ಕೆಲವು ಗ್ರಾಮಸ್ಥರು ತಾಲೂಕಿನ ಮಿನಿ ವಿಧಾನಸೌಧ ಮುಂಭಾಗ ನಡೆಸುತ್ತಿರುವ ಅನರ್ದಿಷ್ಟ ಅವಧಿ ಧರಣಿ ನಡೆಸುತ್ತಿದ್ದು, ಇದೀಗ ಹಗಲು ರಾತ್ರಿ ಧರಣಿ ಮಾಡಲು ಪ್ರಾರಂಭಿಸಿದ್ದಾರೆ.

ಈ ವೇಳೆ ಧರಣಿ ನಿರತರ ಮುಖಂಡರಾದ ಅಶೋಕ್ ಗೌಡ ಪಾಟೀಲ್ ಮಾತನಾಡಿ, ಶಾಸಕರ ಸ್ವಂತ ಊರು ಕುದರಿ ಸಾಲವಾಡಗಿ ಶಾಸಕರು ಹಾಗೂ ಅಧಿಕಾರಿಗಳು ರಸ್ತೆ ಅಗಲೀಕರಣ ನೆಪದಲ್ಲಿ ನೂರಾರು ಬಡವರ ಮನೆಗಳನ್ನು ಕೆಡವಿದ್ದಾರೆ ಕಾರ್ಯಚರಣೆಯಲ್ಲಿ ಮಳೆ ಕಳೆದುಕೊಂಡ ಎಲ್ಲಾ ನಿರಾಶ್ರಿತರಿಗೆ ಸೂಕ್ತ ಪರಿಹಾರ ಹಾಗೂ ಮನೆಗಳನ್ನು ನಿರ್ಮಿಸಿ ಕೊಡಬೇಕೆಂದು ಆಗ್ರಹಿಸಿ ನಿರಾಶ್ರಿತರು ಕಳೆದ 23 ದಿನಗಳಿಂದ ಅನರ್ದಿಷ್ಟ ಅವಧಿ ಧರಣಿ ನಡೆಸುತ್ತಿದ್ದೇವೆ ಮಂಗಳವಾರದಿಂದ ಹಗಲು ರಾತ್ರಿ ಧರಣಿ ಮಾಡಲು ಆರಂಭಿಸಿದ್ದು ಹೋರಾಟದ ಸ್ವರೂಪ ತೀವ್ರ ಗೊಳಿಸಿದ್ದೇವೆ ಎಂದರು. ಧರಣಿ ಮಾಡುವರಲ್ಲಿ ವಯಸ್ಸಾದವರು ಕೂಲಿ ಕಾರ್ಮಿಕರು ಬಡವರೇ ಹೆಚ್ಚಾಗಿದ್ದು ಪ್ರತಿದಿನ ಕೂಲಿ ಮಾಡಿಯೇ ಜೀವನ ಸಾಗಿಸಬೇಕು ವಾಸವಾಗಿದ್ದ ಮನೆಯನ್ನು ಕಳೆದುಕೊಂಡ ನೋವು ಇತ್ತ ಕೂಲಿ ಬಿಟ್ಟು ಪರಿಹಾರಕ್ಕಾಗಿ ಧರಣಿ ನಡೆಸುತ್ತಾ ಸಂಕಟ ಎದುರಿಸುತ್ತಿದ್ದೇವೆ ಕೂಡಲೇ ಶಾಸಕರು ಹಾಗೂ ಅಧಿಕಾರಿಗಳು ಭೇಟಿ ನೀಡಿ ನಿರಾಶ್ರಿತರಿಗೆ ಸೂಕ್ತ ಪರಿಹಾರ ಹಾಗೂ ಇನ್ನಿತರೆ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಧರಣಿಯಲ್ಲಿ ರೈತ ಮುಖಂಡ ಅರವಿಂದ ಕುಲಕರ್ಣಿ, ನಜರ್ ಗುಡ್ನಾಳ, ಅರವಿಂದ್ ಸಜ್ಜನ, ಹನುಮಂತ ಲಗಳಿ, ಅಲ್ತಾಪ ಅತ್ತಾರ್, ಭೀಮಣ್ಣ ಕತಗಾರ, ಪ್ರಮೋದಗೌಡ ಹಚ್ಚಡದ, ಬಾಬು ನದಾಫ್, ಪಾವಡವ ಇಂಗಳಗಿ, ಕಮಲಾ ಇಂಗಳಗಿ, ಗೌರವ ಕಳ್ಳಿಮನಿ, ಶಕಿನಾ ಎಲಿಗಾರ ಧರಣಿಯಲ್ಲಿ ಪಾಲ್ಗೊಂಡಿದ್ದರು.

# ನಾಗರಹೊಳೆ, ಬಂಡೀಪುರ ಸಫಾರಿ, ಚಾರಣ ಇಂದಿನಿಂದಲೇ ಬಂದ್: ಈಶ್ವರ ಖಂಡ್ರೆ



**ಬೀದರ್, ನ.07–** ನಾಗರಹೊಳೆ ಮತ್ತು ಬಂಡೀಪುರ ಸಫಾರಿಯನ್ನು ಹಾಗೂ ಮಾನವ–ವನ್ಯಜೀವಿ ಸಂಘರ್ಷ ಇರುವ ಪ್ರದೇಶದಲ್ಲಿ ಚಾರಣವನ್ನು ಇಂದಿನಿಂದಲೇ ಬಂದ್ ಮಾಡಿ, ಸಿಬ್ಬಂದಿಯನ್ನು ಹುಲಿ ಸೆರೆ ಕಾರ್ಯಾಚರಣೆಗೆ ನಿಯೋಜಿಸಲು ಅರಣ್ಯಸಚಿವ ಈಶ್ವರ ಬಿ.ಖಂಡ್ರೆ ಸೂಚಿಸಿದ್ದಾರೆ. ಪ್ರಧಾನ ಮುಖ್ಯಅರಣ್ಯಸಂರಕ್ಷಣಾಧಿಕಾರಿ ಮತ್ತು ಮುಖ್ಯವನ್ಯಜೀವಿ ಪರಿಪಾಲಕರಿಗೆ ಲಿಖಿತ ಸೂಚನೆ ನೀಡಿರುವ ಅವರು, ಸರಗೂರು ತಾಲ್ಲೂಕು ಮೊಳೆಯೂರು ವಲಯದ ಹಳೆ ಹೆಗ್ಗೊಡಿಲು ಗ್ರಾಮದ ಬಳಿ ಇಂದು ಬೆಳಗ್ಗೆ ಚೌಡಯ್ಯ ನಾಯ್ಕ (35) ಎಂಬುವವರು ಹುಲಿ ದಾಳಿಯಿಂದ ಮೃತಪಟ್ಟಿರುವ ಬಗ್ಗೆ ತೀವ್ರ ನೋವು ವ್ಯಕ್ತಪಡಿಸಿದ್ದಾರೆ.

ಮುಂದಿನ ಆದೇಶದವರೆಗೆ ಎರಡೂ ಕಡೆ ಸಫಾರಿ ಬಂದ್ ಮಾಡಿ, ಅಧಿಕಾರಿ ಮತ್ತು ಸಿಬ್ಬಂದಿಯ ಸೇವೆಯನ್ನು ಹುಲಿ ಸೆರೆ ಕಾರ್ಯಾಚರಣೆಗೆ ಬಳಸಿಕೊಳ್ಳುವಂತೆ ನಿರ್ದೇಶನ ನೀಡಿದ್ದಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಬಂಡೀಪುರ, ನಾಗರಹೊಳೆ ಅರಣ್ಯದಂಚಿನಲ್ಲಿ ಕಳೆದ ಒಂದು ತಿಂಗಳ ಅವಧಿಯಲ್ಲಿ ಹುಲಿ ದಾಳಿಯಿಂದ ಮೂವರ ಅಮೂಲ್ಯ ಜೀವ ಹಾನಿ ಆಗಿರುವುದು ಅತೀವ ನೋವು ತಂದಿದೆ ಎಂದೂ ಅವರು ತಿಳಿಸಿದ್ದಾರೆ.

ಹುಲಿ ದಾಳಿಯ ನಂತರ ಅಕ್ಟೋಬರ್ 27ರಂದು ಬಂಡೀಪುರದಲ್ಲಿ ಅಧಿಕಾರಿಗಳ ಸಭೆ ನಡೆಸಿ ಹಾಗೂ ನ.2ರಂದು ಚಾಮರಾಜ ನಗರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮತ್ತು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹಾಗೂ ಶಾಸಕರುಗಳ ಸಮುಖದಲ್ಲಿ ರೈತರು, ಸಾರ್ವಜನಿಕರೊಂದಿಗೆ ಸಂವಾದ ನಡೆಸಿ, ಹುಲಿ ಸೆರೆಗೆ ಎಲ್ಲ ಸಾಧ್ಯವಿರುವ ಕ್ರಮ ಕೈಗೊಳ್ಳುವಂತೆ ಸೂಚಿಸುವುದರ ಜೊತೆಗೆ ಸಫಾರಿ ಬಂದ್ ಮಾಡುವ ಎಚ್ಚರಿಕೆಯನ್ನೂ ನೀಡಿದ್ದರೂ ಮತ್ತೊಂದು ದಾರುಣ ಘಟನೆ ಸಂಭವಿಸಿರುವುದು ಆಘಾತ ತಂದಿದೆ ಎಂದು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಮುಂದಿನ ಆದೇಶದವರೆಗೆ ಇಂದಿನಿಂದಲೇ ನಾಗರಹೊಳೆ ಮತ್ತು ಬಂಡೀಪುರದಲ್ಲಿ ಸಫಾರಿ ಬಂದ್ ಮಾಡಲು ಮತ್ತು ಮಾನವ–ವನ್ಯಜೀವಿ ಸಂಘರ್ಷ ಇರುವ ಪ್ರದೇಶದಲ್ಲಿ ಟ್ರೆಕ್ಕಿಂಗ್ (ಚಾರಣ) ಸ್ಥಗಿತಗೊಳಿಸಲು ಹಾಗೂ ಬಂಡೀಪುರ, ನಾಗರಹೊಳೆ ಸಫಾರಿಯ ಕಾರ್ಯದಲ್ಲಿ ನಿಯೋಜನೆಗೊಂಡಿರುವ ಎಲ್ಲ ಅಧಿಕಾರಿಗಳು ಮತ್ತು ವಾಹನ ಚಾಲಕರ ಸಹಿತ ಎಲ್ಲ ಸಿಬ್ಬಂದಿ ಹುಲಿ ಸೆರೆ ಕಾರ್ಯಾಚರಣೆಗೆ ನಿಯೋಜನೆ ಮಾಡಲು ಹಾಗೂ ವನ್ಯಜೀವಿ ವಿಭಾಗದ ಎಪಿಸಿಸಿಎಫ್ ಮತ್ತು ಹುಲಿ ಯೋಜನೆಯ ನಿರ್ದೇಶಕರು ಸ್ಥಳದಲ್ಲೇ ಮೊಕ್ಕಾಂ ಹೂಡಿ ಪದೆ ಪದೇ ದಾಳಿ ಮಾಡುತ್ತಿರುವ ಹುಲಿಯನ್ನು ಹಿಡಿಯಲು ಕ್ರಮ ಕೈಗೊಳ್ಳುವಂತೆ ಸ್ಪಷ್ಟ ಸೂಚನೆ ನೀಡಿದ್ದಾರೆ.

# ಕೇಂದ್ರದತ್ತ ಬೊಟ್ಟು ಮಾಡದೆ ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಿ

**ಬೆಂಗಳೂರು, ನ. 7–** ಕಬ್ಬು ಬೆಳೆಗಾರರ ಸಮಸ್ಯೆಯನ್ನು ಪರಿಹರಿಸದ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಎಲ್ಲದಕ್ಕೂ ಕೇಂದ್ರದ ಕಡೆ ಬೊಟ್ಟು ಮಾಡುವುದನ್ನು ಬಿಟ್ಟು ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಿ ಎಂದಿದ್ದಾರೆ.

ಮೈಸೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಣದ ಕೊರತೆ ಇದ್ದರೆ ನನ್ನ ಸರ್ಕಾರದಲ್ಲಿ ಹಣದ ಕೊರತೆ ಇದೆ ಎಂದು ಮುಖ್ಯಮಂತ್ರಿಗಳು ಹೇಳಲಿ ಅದು ಬಿಟ್ಟು ಕೇಂದ್ರದ ಕಡೆ ಬೊಟ್ಟು ಮಾಡುವುದು ಬೇಡ ಎಂದರು

ಇವರ ತಪ್ಪಿಗೆ ಪ್ರಧಾನಿ ಮೋದಿ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವ ತಂತ್ರ ಮಾಡಿದ್ದಾರೆ. ಅದಕ್ಕೆ ಕೇಂದ್ರಕ್ಕೆ ಪತ್ರ ಬರೆದಿದ್ದಾರೆ ಅಷ್ಟೆ. ಕೇಂದ್ರ ಸರ್ಕಾರ ಈಗಾಗಲೇ ಕಬ್ಬಿಗೆ ಎಫ್‌ಆರ್‌ಪಿ ದರ ನಿಗದಿ ಮಾಡಿದೆ. ಸಿದ್ಧರಾಮಯ್ಯ ಅವರು ಮೊದಲೇ ರೈತರು ಹಾಗೂ ಕಾರ್ಖಾನೆ ಮಾಲೀಕರ ಜತೆ ಸಭೆ ಮಾಡಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ ಎಂದರು.

ನಾನು ಈ ಹಿಂದೆ ಎರಡು ಬಾರಿ ಆಕಸ್ಮಿಕ ಸಿಎಂಆಗಿದ್ದೆ. ಬಿಜೆಪಿ–ಕಾಂಗ್ರೆಸ್ ಜತೆ ಸೇರಿ ಸರ್ಕಾರ ಮಾಡಿದ್ದೆ. ಎರಡೂ ಸಂದರ್ಭದಲ್ಲೂ ಕಬ್ಬು ಬೆಳೆಗಾರರ ಸಮಸ್ಯೆಯನ್ನು ನಾನೇ ಬಗೆಹರಿಸಿದ್ದೇನೆ. ಕೇಂದ್ರದ ಕಡೆ ನೋಡಿರಲಿಲ್ಲ. ವೈಯುಕ್ತಿಕ ನಿರ್ಧಾರ ಮಾಡಿದ್ದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಿರಿಯ ನಾಯಕರಿದ್ದಾರೆ. ಎರಡು ಬಾರಿ ಸಿಎಂ ಆಗಿದ್ದಾರೆ. ಅತಿ ಹೆಚ್ಚು ಬಜೆಟ್ ಮಂಡಿಸಿದ ಖ್ಯಾತಿ ಇದೆ. ಇಂತಹವರು ಏನಾದರೂ ಒಂದು ತೀರ್ಮಾನ ಮಾಡಬೇಕಲ್ಲವೆ ಸಣ್ಣ ವಿಷಯವನ್ನು ದೊಡ್ಡದು ಮಾಡಿ ಪ್ರಧಾನಿಗಳು ಮಧ್ಯಸ್ಥಿಕೆ ವಹಿಸಬೇಕು ಎಂದು ಪತ್ರ ಬರೆಯುತ್ತಾರೆ. ಸಿದ್ಧರಾಮಯ್ಯ ಅವರಿಗೆ ರೈತರ ಸಮಸ್ಯೆ ಬಗೆಹರಿಸುವ ಜವಾಬ್ದಾರಿ ಇದೆ. ಆ ಜವಾಬ್ದಾರಿ ಅರಿತು ಕೆಲಸ ಮಾಡಲಿ ಎಂದರು.

ಗ್ಯಾರಂಟಿ ಸ್ಕೀಂ ಉಸ್ತುವಾರಿ ನೋಡಿಕೊಳ್ಳಲು ಸಮಿತಿಗಳನ್ನು ಮಾಡಿ ಕ್ಯಾಬಿನೆಟ್ ಸ್ಥಾನಮಾನ ಕೊಟ್ಟು ದುಂದು ವೆಚ್ಚ ಮಾಡುತ್ತೀರಿ. ರೈತರಿಗೆ ಕೊಡಲು ಆಗಲ್ವಾ, ರೈತರ ಬಗ್ಗೆ ಇವರಿಗೆ ಅಸಡ್ಡೆ. ಕೆಲ ಒತ್ತಡಗಳಿಗೆ ಮಣಿದು ಜನಪ್ರತಿನಿಧಿಗಳ ಕಾರ್ಖಾನೆ ಉಳಿಸುವ ಒತ್ತಡ ಇರಬಹುದು ಎಂದು ವ್ಯಂಗ್ಯವಾಡಿದರು.



ಈ ಹಿಂದೆ ನಾನು 25 ಸಾವಿರ ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದ್ದೆ. ರೈತಪರ ತೀರ್ಮಾನಗಳನ್ನುಸರ್ಕಾರ ಕೈಗೊಳ್ಳಬೇಕು ಎಂದರು.

**ಕ್ರಾಂತಿನೂ ಇಲ್ಲ– ವಾಂತಿನೂ ಇಲ್ಲ**–ನವೆಂಬರ್‌ನಲ್ಲಿ ರಾಜ್ಯದಲ್ಲಿ ಕ್ರಾಂತಿ ಆಗುತ್ತಿದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಇಲ್ಲಿ ಕ್ರಾಂತಿನೂ ಆಗಲ್ಲ, ವಾಂತಿನೂ ಆಗಲ್ಲ. ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್ ಹೈಕಮಾಂಡ್ ಏನು ಮಾತನಾಡಿಕೊಂಡಿದ್ದಾರೊ ನನಗೆ ಗೊತ್ತಿಲ್ಲ ಎಂದರು.

ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ 136 ಸೀಟಿ ಕೊಟ್ಟು ಹಿಂದಿನ ಬಿಜೆಪಿ ಸರ್ಕಾರದ ತಪ್ಪು ಸರಿ ಮಾಡಿ ಅಧಿಕಾರ ನಡೆಸಿ ಎಂದರು ಆದರೆ ಈ ಕಾಂಗ್ರೆಸ್ ಸರ್ಕಾರಕ್ಕಿಂತ ಹಿಂದಿನ ಸರ್ಕಾರವೇ ಸರಿ ಇತ್ತು ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ ಎಂದರು.ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿಎಂ ಆಗುತ್ತಾರೆ ಎಂಬ ಪ್ರಶ್ನೆಗೆ ಶಿವಕುಮಾರ್ ಸಿಎಂ ಆಗುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಪ್ರತಿ ದಿನ ದೇವರ (ಹೈಕಮಾಡ್)ಜತೆ ಚರ್ಚೆ ಮಾಡುತ್ತಾರೆ. ಅವರು ದೇವರ ಹತ್ತಿರ ಏನು ಕೇಳುತ್ತಿದ್ದಾರೋ ನೋಡೋಣ ಎಂದು ಮಾರ್ಮಿಕವಾಗಿ ಹೇಳಿದರು.

# ಶಾಲೆ, ಆಸ್ಪತ್ರೆ, ಬಸ್, ರೈಲು ನಿಲ್ದಾಣಗಳಿಂದ ಬೀದಿ ನಾಯಿ ತೆರವಿಗೆ ಸೂಚನೆ

**ನವದೆಹಲಿ,ನ.7–** ಬೀದಿ ನಾಯಿಗಳ ಕಡಿತದ ಪ್ರಕರಣಗಳ ಭೀಕರ ಏರಿಕೆಯ ನಡುವೆ, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮುಂತಾದ ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ತೆಗೆದುಹಾಕಲು ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶಿಸಿದೆ.

ನ್ಯಾಯಮೂರ್ತಿಗಳು ವಿಕ್ರಮನಾಥ್, ಸಂದೀಪ್ ಮೇಹ್ತಾ ಮತ್ತು ಎನ್.ವಿ. ಅಂಜಾರಿಯಾ ಅವರಿದ್ದ ಪೀಠವು, ಈ ಸಂಸ್ಥೆಗಳ ಆವರಣಗಳಲ್ಲಿ ಅಲೆಮಾರಿ ನಾಯಿಗಳ ಪ್ರವೇಶ ತಡೆಯಲು ಸರಿಯಾದ ತಡೆ ಬೇಲಿ ಇರುವಂತೆ ನೋಡಿಕೊಳ್ಳುವಂತೆ ಹೇಳಿದೆ. ಸಂಬಂಧಿತ ಸ್ಥಳೀಯ ಸ್ವಯಂಸರ್ಕಾರ ಸಂಸ್ಥೆಗಳು ಈ ಪ್ರದೇಶಗಳಿಂದ ಅಲೆಮಾರಿ ನಾಯಿಗಳನ್ನು ಪತ್ತೆಹಚ್ಚಿ, ಲಸಿಕೆ ಹಾಕಿಸಿ, ಸಂತಾನಹರಣ ನಂತರ ನಿಗದಿತ ನಾಯಿ ಆಶ್ರಯಗಳಿಗೆ ಸ್ಥಳಾಂತರಿಸುವುದು ಅವರ ಜವಾಬ್ದಾರಿ ಎಂದು ಕೋರ್ಟ್ ತಿಳಿಸಿದೆ.

**ನಾಯಿಗಳನ್ನು ತಂದ ಸ್ಥಳದಲ್ಲಿ ಮತ್ತೆ ಬಿಡಬೇಡಿ"**–ಕೋರ್ಟ್ ವಿಶೇಷವಾಗಿ ಒತ್ತಿಹೇಳಿದ, ಈ ಪ್ರದೇಶಗಳಿಂದ ತೆರವುಗೊಳಿಸಿದ ನಾಯಿಗಳನ್ನು ಅದೇ ಸ್ಥಳದಲ್ಲಿ ಬಿಡಬಾರದು. ಅಂತಹ ಸಂಸ್ಥೆಗಳನ್ನು ಅಲೆಮಾರಿ ನಾಯಿಗಳ ಉಪಸ್ಥಿತಿಯಿಂದ ಮುಕ್ತಗೊಳಿಸುವ ಉದ್ದೇಶವೇ ವಿಫಲಗೊಳ್ಳುವ ಸಾಧ್ಯತೆ ಇದೆ ಎಂದು ಪೀಠವು ಅಭಿಪ್ರಾಯಪಟ್ಟಿದೆ. ಸ್ಥಳೀಯ ಸಂಸ್ಥೆಗಳು ಈ ಆವರಣಗಳಲ್ಲಿ ಅಲೆಮಾರಿ ನಾಯಿಗಳ ವಾಸಸ್ಥಳಗಳು ಅಸ್ತಿತ್ವದಲ್ಲಿಲ್ಲ ಎಂದು ಖಚಿತಪಡಿಸಿಕೊಳ್ಳಲು ನಿಯತಕಾಲಿಕ ತನಿಖೆ ನಡೆಸಬೇಕು ಎಂದೂ ಆದೇಶಿಸಲಾಗಿದೆ.

ಕೋರ್ಟ್ ತನ್ನ ತೀರ್ಪನ್ನು ಘೋಷಿಸಿದ ನಂತರ, ಹಿರಿಯ ವಕೀಲರು ಆನಂದ ಗ್ರೋವರ್, ಕರುಣಾ ನಂದಿ ಅವರುಗಳು ತಮ್ಮ ವಾದಗಳನ್ನು ಮಂಡಿಸುವ ಅವಕಾಶ ಕೋರಿದರು. ನಾಯಿಗಳನ್ನು ತೆರವು ಗೊಳಿಸಿದರೆ ಹೊಸ ನಾಯಿಗಳು ಅದೇ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತವೆ ಎಂದು ನಂದಿ ವಾದಿಸಿದರು. ಆದರೆ, ಪೀಠವು ಈ ವಾದಗಳನ್ನು ಪರಿಗಣಿಸಲು ನಿರಾಕರಿಸಿತು.

ಕೋರ್ಟ್ ರಸ್ತೆಗಳು ಮತ್ತು ಹೆದ್ದಾರಿಗಳಿಂದ ಅಲೆಮಾರಿ ಪಶುಗಳನ್ನು ಮತ್ತು ಇತರ ಪ್ರಾಣಿಗಳನ್ನು ತೆಗೆದುಹಾಕಲು ಸೂಚನೆಗಳನ್ನು ಕೂಡಾ ನೀಡಿದೆ. ರಾಜಸ್ಥಾನ ಹೈಕೋರ್ಟ್ ಅಲೆಮಾರಿ ಪಶುಗಳನ್ನು ಹೆದ್ದಾರಿಗಳಿಂದ ತೆಗೆದುಹಾಕಲು ನೀಡಿದ್ದ ಸೂಚನೆಗಳನ್ನು ಸುಪ್ರೀಂ ಕೋರ್ಟ್ ಖಾತ್ರಿಪಡಿಸಿದೆ.



ಹೆದ್ದಾರಿಗಳು,ರಸ್ತೆಗಳು,ಎಕ್ಸ್‌ಪ್ರೆಸ್‌ವೇಗಳಲ್ಲಿ ಕಂಡುಬರುವ ಎಲ್ಲಾ ಅಂತಹ ಪ್ರಾಣಿಗಳನ್ನು ತಕ್ಷಣ ತೆಗೆದುಹಾಕಲು ಒಂದು ಜಂಟಿ ಸಂಘಟಿತ ಚಳುವಳಿ ನಡೆಸಬೇಕು ಎಂದು ಕೋರ್ಟ್ ಹೇಳಿದೆ. ಈ ಪ್ರಾಣಿಗಳನ್ನು ಗೋಶಾಲೆಗಳು ಅಥವಾ ಆಶ್ರಯ ಗೃಹಗಳಿಗೆ ಸ್ಥಳಾಂತರಿಸಬೇಕು. ಎಲ್ಲಾ ರಾಜ್ಯಗಳ,ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಇದರ ಕಟ್ಟುನಿಟ್ಟಾದ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬೇಕು. ಇಲ್ಲದಿದ್ದರೆ, ಅಧಿಕಾರಿಗಳನ್ನು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ಕೋರ್ಟ್ ಎಚ್ಚರಿಕೆ ನೀಡಿದೆ.

ಜುಲೈ 28ರಂದು, ಸುದ್ದಿಸಂಸ್ಥೆಯೊಂದು ನಗರವನ್ನು ಅಲೆಮಾರಿ ನಾಯಿಗಳು ತೊಂದರೆಗೊಳಪಡಿಸಿದೆ, ಮಕ್ಕಳು ಬಲಿ' ಲೇಖನವನ್ನು ಆಧರಿಸಿ ಸುಪ್ರೀಂ ಕೋರ್ಟ್ ಸ್ವತಃ ಪ್ರೇರಿತವಾಗಿ (ಸುವೋ ಮೋಟು) ಈ ವಿಚಾರಣೆಯನ್ನು ಪ್ರಾರಂಭಿಸಿತು.

ಆಗಸ್ಟ್ 11ರಂದು, ಡೆಲ್ಲಿಯಲ್ಲಿ ನಾಯಿ ಕಡಿತ,ರೇಬೀಸ್ ಸಮಸ್ಯೆಗೆ ಕೋರ್ಟ್ ಕೆಲವು ತಾತ್ಕಾಲಿಕ ನಿರ್ದೇಶನಗಳನ್ನು ನೀಡಿತ್ತು. ಆದರೆ, ಆಗಸ್ಟ್ 22ರಂದು, ಮೂವರು ನ್ಯಾಯಮೂರ್ತಿಗಳ ಪೀಠವು ಆ ನಿರ್ದೇಶನಗಳನ್ನು ತಾತ್ಕಾಲಿಕವಾಗಿ ತಡೆಹಾಕಿತ್ತು. ಅಕ್ಟೋಬರ್ 27ರಂದು, ಪಶು ಸಂಗೋಪನಾ ಇಲಾಖೆ ಮತ್ತು ನಗರ ಸಂಸ್ಥೆಗಳ ಕಾರ್ಯದರ್ಶಿಗಳನ್ನು ನಿಯಮಗಳ ಅನುಷ್ಠಾನದ ಬಗ್ಗೆ ವರದಿ ಸಲ್ಲಿಸುವಂತೆ ಕೋರ್ಟ್ ಆದೇಶಿಸಿತ್ತು.

ಪಶ್ಚಿಮ ಬಂಗಾಳ ಮತ್ತು ತೆಲಂಗಾಣ ಹೊರತುಪಡಿಸಿ ಇತರ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ವರದಿ ಸಲ್ಲಿಸದ ಕಾರಣ, ಅವರನ್ನು ವ್ಯಕ್ತಿಯಾಗಿ ಹಾಜರಾಗುವಂತೆ ಕೋರ್ಟ್ ತೀರ್ಪು ನೀಡಿತ್ತು.

# "ವಂದೇ ಮಾತರಂ" ಗೀತೆಯಲ್ಲ ಮಂತ್ರ

**ನವದೆಹಲಿ.ನ7–** "ವಂದೇ ಮಾತರಂ" ಗೀತೆಯಲ್ಲ ಮಂತ್ರ, ನಮ್ಮ ವರ್ತಮಾನವನ್ನು ಆತ್ಮವಿಶ್ವಾಸವನ್ನು ತುಂಬಲಿದೆ ಇದರ ಪಠಣೆಯಿಂದ ಯಾವುದೇ ಗುರಿಯನ್ನು ಸಾಧಿಸಲು ಸಾಧ್ಯ ಎಂಬ ಧೈರ್ಯ ನೀಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.ರಾಷ್ಟ್ರಗೀತೆ "ವಂದೇ ಮಾತರಂ" ರಚನೆಯಾಗಿ 150 ವರ್ಷಗಳ ಅಂಗವಾಗಿ ಶುಕ್ರವಾರ ಇಂದಿರಾ ಗಾಂಧಿ ಇಂಡೋರ್ ಸ್ಟೇಡಿಯಂನಲ್ಲಿ ಸ್ಮರಣೋತ್ಸವಕ್ಕೆ ಚಾಲನೆ ನೀಡಿದ ಪ್ರಧಾನಿ ಮೋದಿ, ಸ್ಮರಣಾರ್ಥ ಚಿಹ್ನೆ ಮತ್ತು ನಾಣ್ಯವನ್ನು ಬಿಡುಗಡೆ ಮಾಡಿದರು."ಇಂದು ನಾವು 'ವಂದೇ ಮಾತರಂ'ಗೆ 150 ವರ್ಷಗಳನ್ನು ಗುರುತಿಸುತ್ತಿದ್ದೇವೆ; ಇದು ನಮಗೆ ಹೊಸ ಪ್ರೇರಣೆಯನ್ನು ನೀಡುತ್ತದೆ, ದೇಶದ ಜನರನ್ನು ಹೊಸ ಶಕ್ತಿಯಿಂದ ತುಂಬಿಸುತ್ತದೆ," ಎಂದು ಪ್ರಧಾನಿ ಮೋದಿ ಅವರು ಹೇಳಿದರು.

"ಇಂದಿನ ದಿನವು (ನವೆಂಬರ್ 7) ಒಂದು ಐತಿಹಾಸಿಕ ದಿನ. ನಾವು ವಂದೇ ಮಾತರಂ ರಚನೆಯ 150 ವರ್ಷಗಳ ಭವ್ಯ ಆಚರಣೆಯನ್ನು ನಡೆಸುತ್ತಿದ್ದೇವೆ ಈ ಕಾರ್ಯಕ್ರಮವು ಕೋಟಿ ಭಾರತೀಯರಲ್ಲಿ ಹೊಸ ಶಕ್ತಿಯನ್ನು ಉತ್ಪಾದಿಸುತ್ತದೆ ವಂದೇ ಮಾತರಂಗೆ 150ನೇ ವರ್ಷದ ಅವಸರೆಯಲ್ಲಿ ಪ್ರತಿಯೊಬ್ಬ ನಾಗರಿಕರಿಗೆ ನನ್ನ ಅಭಿನಂದನೆಗಳು.ವಂದೇ ಮಾತರಂ'ನ ಮುಖ್ಯ ಭಾವನೆಯೆಂದರೆ ಭಾರತ, ಮಾತೃ ಭೂಮಿ ಭಾರತವು ರಾಷ್ಟ್ರವಾಗಿ ಒಂದು ಕುಂದನ್ (ಬೆಲೆಬಾಳುವ ರತ್ನ) ಆಗಿ ಮೂಡಿ ಬಂತು, ಅದು ಹಿಂದಿನ ಪ್ರತಿಯೊಂದು ಪೆಟ್ಟನ್ನು ಸಹಿಸಿತು ಮತ್ತು ಸಹಿಸಿ ಕೂಡಾ ಅಮರತ್ವವನ್ನು ಪಡೆಯಿತು "

**ದೇಶವ್ಯಾಪಿ ಸಮೂಹ ಗಾನ–** ಈ ಕಾರ್ಯಕ್ರಮವು ನವೆಂಬರ್ 7, 2025 ರಿಂದ ನವೆಂಬರ್ 7, 2020 ರ ವರೆಗಿನ ದೀರ್ಘವರ್ಷದ ದೇಶವ್ಯಾಪಿ ಸ್ಮರಣೆಯ ಔಪಚಾರಿಕ ಆರಂಭವನ್ನು ಗುರುತಿಸುತ್ತದೆ. ಇದು ಭಾರತದ ಸ್ವಾತಂತ್ರ್ಯ



ಚಳುವಳಿಗೆ ಪ್ರೇರಣೆ ನೀಡಿದ ಮತ್ತು ರಾಷ್ಟ್ರೀಯ ಅಭಿಮಾನ ಮತ್ತು ಏಕತೆಯನ್ನು ಉಂಟುಮಾಡುವ ಅಮರ ರಚನೆಯ 150 ವರ್ಷಗಳನ್ನು ಆಚರಿಸುತ್ತದೆ.

"ಸಾರ್ವಜನಿಕ ಸ್ಥಳಗಳಲ್ಲಿ ಸುಮಾರು ಗಂಟೆ 9:50 ರ ಸುಮಾರಿಗೆ ಸಮಾಜದ ಎಲ್ಲಾ ವರ್ಗಗಳ ನಾಗರಿಕರ ಭಾಗವಹಿಸುವಿಕೆಯೊಂದಿಗೆ 'ವಂದೇ ಮಾತರಂ'ನ ಪೂರ್ಣ ಆವೃತ್ತಿಯ ಸಮೂಹ ಗಾನವನ್ನು ನಡೆಸಲಾಗುವುದು," ಎಂದು ಅವರು ಹೇಳಿದರು.

ಬಂಕಿಮಚಂದ್ರ ಚಟರ್ಜಿ ಅವರು 1875ರ ನವೆಂಬರ್ 7ರಂದು, ಅಕ್ಷಯ ನವಮಿ ಶುಭ ದಿನದಂದು "ವಂದೇ ಮಾತರಂ" ಅನ್ನು ರಚಿಸಿದರು. ಈ ಗೀತೆ ಮೊದಲು "ಬಂಗದರ್ಶನ" ಸಾಹಿತ್ಯ ಪತ್ರಿಕೆಯಲ್ಲಿ ಚಟರ್ಜಿ ಅವರ "ಆನಂದಮಠ" ಕಾದಂಬರಿಯ ಭಾಗವಾಗಿ ಕಾಣಿಸಿಕೊಂಡಿತು. ಮಾತೃಭೂಮಿಯನ್ನು ಶಕ್ತಿ, ಸಮೃದ್ಧಿ ಮತ್ತು ದಿವ್ಯತೆಯ ಪ್ರತೀಕವಾಗಿ ಆಹ್ವಾನಿಸುವ ಈ ಹಾಡು, ಭಾರತದ ಏಕತೆ ಮತ್ತು ಸ್ವಾಭಿಮಾನದ ಜಾಗೃತ ಭಾವನೆಗೆ ಕಾವ್ಯಾತ್ಮಕ ಅಭಿವ್ಯಕ್ತಿ ನೀಡಿತು. ಇದು ಶೀಘ್ರದಲ್ಲೇ ರಾಷ್ಟ್ರದ ಪ್ರತಿ ಭಕ್ತಿಯ ಅನಂತ ಪ್ರತೀಕವಾಯಿತು.

# ಬೆಲೆ ಏರಿಕೆ ವಿರುದ್ಧ ಜೆಡಿಎಸ್ ಪ್ರತಿಭಟನೆ

**ಬೆಂಗಳೂರು, ನ.7–**ರಾಜ್ಯದ ಜನತೆಯ ಮೇಲೆ ರಾಜ್ಯ ಸರ್ಕಾರ ಅತಿ ಹೆಚ್ಚು ತೆರಿಗೆಯನ್ನು ವಿಧಿಸಿದೆ ಎಂದು ಆರೋಪಿಸಿ ಜೆಡಿಎಸ್ ನಗರದ ಸ್ವಾತಂತ್ರ್ಯ ಉದ್ಯಾನವನದ ಬಳಿ ಇಂದು ಪ್ರತಿಭಟನೆ ನಡೆಸಿತು.

ಬೆಂಗಳೂರು ಮಹಾನಗರ ಜೆಡಿಎಸ್ ಅಧ್ಯಕ್ಷ ಹೆಚ್.ಎಂ.ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ನಗರ ಮಹಿಳಾ ಘಟಕದ ಅಧ್ಯಕ್ಷೆ ಶೈಲ ಸಂತೋಜಿರಾವ್, ಪಕ್ಷದ ಮುಖಂಡರಾದ ತಿಮ್ಮೆಗೌಡ, ಕೆ.ವಿ.ನಾರಾಯಣಸ್ವಾಮಿ, ತುಳಸಿರಾಮ್, ನಾಗೇಶ್‌ರಾವ್, ಸ್ಯಾಮುಯಲ್ ಮೊದಲಾದವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಸ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು. ಸರ್ಕಾರದ ವಿರುದ್ಧದ ಘೋಷಣೆಗಳುಳ್ಳ ಫಲಕಗಳನ್ನು ಪ್ರವೇಶಿದರು.

ಶರವಣ ಮಾತನಾಡಿ, ರಾಜ್ಯದಲ್ಲಿ ಪ್ರತಿಯೊಂದು ವಸ್ತುಗಳ ಬೆಲೆಯೂ ಏರಿಕೆಯಾಗಿದ್ದು ಜನ ಕಂಗೆಟ್ಟು ಹೋಗಿದ್ದಾರೆ. ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದ್ದು, ಸರ್ಕಾರದ ಬೊಕ್ಕಸ ಖಾಲಿ ಆಗಿದೆ. ಹಣವಿಲ್ಲದೆ ಸರ್ಕಾರ ನಡೆಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಜನಸಾಮಾನ್ಯರ ಹೊಟ್ಟೆ ಮೇಲೆ ಹೊಡೆದು, ಅವರ ಜೇಬಿಗೆ ಕತ್ತರಿ ಹಾಕಿ ಆಡಳಿತ ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಗ್ರೇಟರ್ ಬೆಂಗಳೂರಿನ ನಾಗರಿಕರ ಆಸ್ತಿಗಳ ಮೇಲೆ ಅಧಿಕವಾಗಿ ತೆರಿಗೆಯನ್ನು ವಿಧಿಸಿ ಸಂಕಷ್ಟಕ್ಕೆ ಸಿಲುಕಿಸಿರುವ ರಾಜ್ಯ ಕಾಂಗ್ರೆಸ್




ಸ್ಕಾರವನ್ನು ಅವರು ತೆರಿಗೆ ಭಯೋತ್ಪಾದಕ ಸ್ಕಾರ ಎಂದು ಟೀಕಿಸಿದ ಅವರು, ಸಂಪನೂಲ ಕ್ರೋಢೀಕರಣದ ಹೆಸರಲ್ಲಿ ಭೂಮಿಯ ಮುಖ ಬೆಲೆ ಹೆಚ್ಚಿಸುವುದು, ರಿಜಿಸ್ಟ್ರೇ?ಷನ್ ಶುಲ್ಕ ಹೆಚ್ಚಿಸುವುದು, ಮದ್ಯದ ದರ ಹೆಚ್ಚಿಸುವುದು ಇದೇ ಸರ್ಕಾರದ ಕಾಯಕವಾಗಿದೆ. ಸರ್ಕಾರ ದಿವಾಳಿಯಾಗಿದೆ ಮತ್ತು ಪತನದ ಅಂಚಿಗೆ ಬಂದಿದೆ. ಸ್ಕಾರ ತನ್ನ ಹಣಕಾಸು ಪರಿಸ್ಥಿತಿಯ ಬಗ್ಗೆ ತಕ್ಷಣ ಶ್ವೇತಪತ್ರವನ್ನು ಹೊರಡಿಸಬೇಕು ಎಂದು ಆಗ್ರಹಿಸಿದರು.

ರಮೇಶ್‌ಗೌಡ ಮಾತನಾಡಿ, ಗ್ಯಾರಂಟಿಗಳ ಭರವಸೆ ನೀಡಿ ಅಧಿಕಾರಕ್ಕೆ ಬಂದ ಸರ್ಕಾರ ಅಭಿವೃದ್ಧಿಗೆ ತಿಲಾಂಜಲಿ ನೀಡಿದೆ. ಹೊಸದಾಗಿ ಬಿ ಖಾತಾದಿಂದ ಎ ಖಾತಾ ಎಂದು ಹೇಳುವ ಮೂಲಕ ಜನರನ್ನು ಸುಲಿಗೆ ಮಾಡುತ್ತಿದೆ ಎಂದು ಆರೋಪಿಸಿದರು.

# ಹುಲಿ ದಾಳಿಗೆ ರೈತ ಬಲಿ

**ಮೈಸೂರು,ನ.7–** ಸರಗೂರು ತಾಲೂಕಿನ ಹಳೇ ಹೆಗ್ಗುಡಿಲು ಗ್ರಾಮದ ಒಂದು ಜಮೀನಿನಲ್ಲಿ ಬೆಳಿಗ್ಗೆ ಹುಲಿಯ ದಾಳಿಗೆ ರೈತ ಚೌಡನಾಯಕ (40) ಬಲಿಯಾಗಿದ್ದಾರೆ. ತನ್ನ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾಗ ಹಿಂದಿನಿಂದ ಬಂದ ಹುಲಿ ಅವರ ಮೇಲೆ ದಾಳಿ ಮಾಡಿ ಎಳೆದುಕೊಂಡು ಹೋಗಿದೆ.

ದಾಳಿ ನಡೆದ ಸಮಯದಲ್ಲಿ ಅಲ್ಲಿದ್ದ ಎತ್ತುಗಳು ಗಾಬರಿಗೊಂಡು ರೈತನ ಮನೆಗೆ ಓಡಿಬಂದಿದ್ದವು. ಈ ಸಂಗತಿ ಕಂಡು ಕುಟುಂಬದವರು ಮತ್ತು ಗ್ರಾಮಸ್ಥರು ಆತಂಕಗೊಂಡು ಜಮೀನಿನತ್ತ ಹೋಗಿ ಹುಡುಕಿದಾಗ, ಒಂದು ಹಳ್ಳದಲ್ಲಿ ಹುಲಿ ತಿಂದು ಬಿಸಾಡಿರುವ ರೀತಿಯಲ್ಲಿ ಚೌಡನಾಯಕನ ಮೃತದೇಹ ಪತ್ತೆಯಾಗಿದೆ. ಕುಟುಂಬದ ದುರದೃಷ್ಟಕ್ಕೆ ಇದು ಎರಡನೇ ದುರ್ಘಟನೆ. ಕಳೆದ ವರ್ಷ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಚೌಡನಾಯಕರ ಮೇಲೆ ಆನೆ ದಾಳಿ ಮಾಡಿತ್ತು. ಅದರಲ್ಲಿ ಅವರ ಸೊಂಟ ಮುರಿದು ಹೋಗಿದ್ದು, ಚಿಕಿತ್ಸೆ ಮುಗಿಸಿ ಸುಮಾರು ಮೂರು ತಿಂಗಳ ಹಿಂದೆ ಮಾತ್ರ ಕೆಲಸಕ್ಕೆ ಮರಳಿದ್ದರು. ಈ ಘಟನೆಯಿಂದ ಚೌಡನಾಯಕರ ಪತ್ನಿ ರುಕ್ಮಿಣಿ ಮತ್ತು ಮೂವರು ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳು ಅನಾಥರಾಗಿದ್ದಾರೆ. ಘಟನೆಯ



ಸ್ಥಳಕ್ಕೆ ಹೆಡಿಯಾಲ ಎಸಿಎಫ್ ಪರಮೇಶ್, ಆರ್‌ಪಿಒ ಅಮೃತ ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಇತ್ತೀಚೆಗೆ ಸರಗೂರು ಪ್ರದೇಶದಲ್ಲಿ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಿದೆ. ಸರಗೂರು ಬಡಗಲಪುರ ಗ್ರಾಮದ ರೈತ ಮಹಾದೇವ (ಮಾದೇಗೌಡ) ಹುಲಿ ದಾಳಿಯಲ್ಲಿ ಗಂಭೀರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಣಟಿಜಜಡಿರಿದ್ದಾರೆ. ಇದರ ಜೊತೆಯೇ, ಬಣ್ಣೆಗೆರೆ ಗ್ರಾಮದ ರಾಜಶೇಖರ್ ಮತ್ತು ಕುರ್ಣೇಗಾಲ ಗ್ರಾಮದ ದೊಡ್ಡನಿಂಗಯ್ಯ (65) ಹುಲಿ ದಾಳಿಗೆ ಬಲಿಯಾಗಿದ್ದರು. ಚೌಡನಾಯಕರ ಮರಣದೊಂದಿಗೆ, ಈ ಪ್ರದೇಶದಲ್ಲಿ ಹುಲಿ ದಾಳಿಯಿಂದ ಮರಣಿಸಿದವರ ಸಂಖ್ಯೆ ಮೂರಿಗೇರಿದೆ.

## ಜೆಸ್ಕಾಂ–2: ನವೆಂಬರ್ 10 ರಿಂದ 12ರವರೆಗೆ ವಿದ್ಯುತ್ ವ್ಯತ್ಯಯ

**ರಾಯಚೂರು,ನ.7–** ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–2ರ ವ್ಯಾಪ್ತಿಯ ಎ.ಪಿ.ಎಂ.ಸಿ 11 ಕೆವಿಯಲ್ಲಿ ಸ್ಥಳಾಂತರ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಪ್ರಯುಕ, ಇದೇ ನವೆಂಬರ್ 10 ರಿಂದ ನವೆಂಬರ್ 12ರವರೆಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ನಿಗದಿತ ದಿನಾಂಕಗಳಂದು ಸಿಎಮ್‌ಸಿ ವಾಟರ್ ಸಪ್ಲೈ, ಮಂಚಲಾಪುರ ರಸ್ತೆ, ಬೈಪಾಸ್ ರಸ್ತೆಯಲ್ಲಿರುವ ಇಂಡಸ್ಟ್ರೀಯಿಲ್ ಏರಿಯಾ, ರಿಮ್ಸ್ ಆಸ್ಪತ್ರೆ, ಓಪೆಕ್ ಆಸ್ಪತ್ರೆ, ಇಂಡಸ್ಟ್ರೀಯಿಲ್ ಏರಿಯಾ, ಎಲ್.ಬಿ.ಎಸ್. ನಗರ, ಪೋಲೀಸ್ ಕಾಲೋನಿ, ಅಲ್ಲಮಪ್ರಭು ಕಾಲೋನಿ, ಗಂಜ್ ಏರಿಯಾ, ಚಂದ್ರಬಂಡ ರಸ್ತೆ, ಹುಂಡೇಕರ್ ಕಾಲೋನಿ, ಎನ್‌ಜಿಒ ಕಾಲೋನಿ, ಆಶ್ರಯ ಕಾಲೋನಿ, ಯರಮರಸ್ ಕ್ಯಾಂಪ್, ಪೋತಗಲ್, ಅಮರಾವತಿ, ಯರಮರಸ್ ಕೈಗಾರಿಕಾ ಪ್ರದೇಶ, ನಂದಿನಿ ಹಾಲು ಡೈರಿ, ಗೆಸ್ಟ್ ಹೌಸ್, ಸರಕಾರಿ ಇಂಜಿಯಿಯರ್ ಕಾಲೇಜ್, ಎಸ್.ಎಲ್.ಎನ್. ಇಂಜಿನಿಯರಿಂಗ್ ಕಾಲೇಜ್, ಐ.ಐ.ಐಟಿ ಯರಮರಸ್ ಕ್ಯಾಂಪ್, ಪೋತಗಲ್, ಅಮರಾವತಿ, ಯರಮರಸ್ ದಂಡು, ಏಗನೂರು ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:8532–226386, 08532–231999ಗೆ ಸಂಪರ್ಕಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 1.40 ಲಕ್ಷ ರೂ.ನಗದು ಕಳವು

**ಕಲಬುರಗಿ,ನ.7–**ನಗರದ ಸುಪರ್ ಮಾರ್ಕೆಟ್‌ನ ತರಕಾರಿ ಮಾರ್ಕೆಟ್ ಕಟ್ಟದಲ್ಲಿರುವ ಭವಾನಿ ಮಾರ್ಕೆಟಿಂಗ್–ಬೇಕರಿ ಸಾಮಾನುಗಳ ಹೋಲ್‌ಸೇಲ್ ಅಂಗಡಿ ಶೆಟರ್ ಮೇಲೆತ್ತಿ ಗಲ್ಲಾದಲ್ಲಿದ್ದ 1.40 ಲಕ್ಷ ರೂ.ನಗದನ್ನು ಕಳ್ಳರು ಕಳವು ಮಾಡಿಕೊಂಡು ಹೋಗಿದ್ದಾರೆ.

ಈ ಸಂಬಂಧ ಅಂಗಡಿ ಮಾಲಿಕ ನರೇಶ್ ಚೌಧರಿ ಅವರು ಚೌಕ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

## ಗುರುವಂದನೆ ಅಂಗವಾಗಿ ಒಳಬಳ್ಳಾರಿ ಶ್ರೀಗಳ ವೈಭವದ ಸಾರೋಟಿನ ಮೆರವಣಿಗೆ

**ಯುವ ಮಾರ್ಗ ಸುದ್ದಿ**

**ಪೋತ್ನಾಳ್:** ತಾಲೂಕಿನ ಕರೆಗುಡ್ಡ ಗ್ರಾಮದ ಶ್ರೀ ಮಹಾಂತೇಶ್ವರ ಮಠದಲ್ಲಿ ಶ್ರೀಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪಟ್ಟಾಧಿಕಾರ ರಜತ ಮಹೋತ್ಸವ ಅಂಗವಾಗಿ ಗುರುವಾರ ಸಂಜೆ ನಡೆದ ಮಹಾತ್ಮರ ಜೀವನ ದರ್ಶನ ಪ್ರವಚನ ಕಾರ್ಯಕ್ರಮದ ಮಹಾಮಂಗಲೋತ್ಸವ ಹಾಗೂ ಗುರುವಂದನೆ ಕಾರ್ಯಕ್ರಮದ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳ ಮೂಲಕ ಶ್ರೀ ಮಹಾಂತೇಶ್ವರ ಮಠದವರೆಗೆ ವಿವಿಧ ಜನಪದ ಕಲಾ ತಂಡಗಳೊಂದಿಗೆ ಹಾಗು ಜನಪದ ವಾದ್ಯಗಳೊಂದಿಗೆ ಸುಮಂಗಲಿಯರು ಕಳಸ ಹಾಗೂ ಕುಂಬಗಳೊಂದಿಗೆ ಒಳಬಳ್ಳಾರಿ ಸುವರ್ಣಗಿರಿ ವಿರಕ್ತಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳನ್ನು ಹಾಗೂ ಕರೆಗುಡ್ಡ ಶ್ರೀ ಮಹಾಂತೇಶ್ವರ ಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳನ್ನು ಸಾರೋಟಿನಲ್ಲಿ ಮೆರವಣಿಗೆ ನಡೆಸಲಾಯಿತು.



ಒಳಬಳ್ಳಾರಿ ಸುವರ್ಣಗಿರಿ ವಿರಕ್ತಮಠದ ಕಿರಿಯ ಶ್ರೀಗಳಾದ ಬಸವಲಿಂಗ ಮಹಾಸ್ವಾಮಿಗಳು, ಸಂಗನ ಬಸವ ದೇವರು, ಮೈಸೂರಿನ ನಿರಂಜನದೇವರು, ದರೂರು ಸಂಗನಬಸವೇಶ್ವರ ಮಠದ ಶ್ರೀ ಕೊಟ್ಟೂರು ಮಹಾಸ್ವಾಮಿಗಳು ಸೇರಿದಂತೆ. ನಾಡಿನ ವಿವಿಧ ಮಠಗಳ ಶ್ರೀಗಳು ಹಾಗೂ ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ ಸೇರಿದಂತೆ ಗ್ರಾಮದ ಮುಖಂಡರು,ಸಾವಿರಾರು ಶ್ರೀ ಮಠದ ಭಕ್ತರು ಭಾಗವಹಿಸಿದರು.

## ದೇವದುರ್ಗದಲ್ಲಿ ಅಂತಾರಾಷ್ಟ್ರೀಯ ದತ್ತು ಜಾಗೃತಿ ಕಾರ್ಯಕ್ರಮ:

**ಯುವ ಮಾರ್ಗ ಸುದ್ದಿ**

**ದೇವದುರ್ಗ,ನ.7–**ರಾಷ್ಟ್ರೀಯ ದತ್ತು ಮಾಸಾಚರಣೆ ಅಂಗವಾಗಿ, ಅಂತಾರಾಷ್ಟ್ರೀಯ ದತ್ತು ಅರಿವು ಮತ್ತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಕ್ಕಳ ಹಕ್ಕುಗಳು ಮತ್ತು ತುರ್ತು ಪೋಷಣಾ ಯೋಜನೆಗಳ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಾಮಾಜಿಕ ಕಾರ್ಯಕರ್ತರೂ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ರಾಯಚೂರು ಇವರ ಪ್ರತಿನಿಧಿ ತಿಕ್ಕಯ್ಯ ಅವರು ಭಾಗವಹಿಸಿದ್ದರು. ಇವರು ಅಂತರಾಷ್ಟ್ರೀಯ ದತ್ತು ಅರಿವು, ಜಾಗೃತಿ, ಪೋಷಕತ್ವ ಯೋಜನೆ, ಬಾಲ್ಯವಿವಾಹ, ಬಾಲಕಾರ್ಮಿಕತೆ ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಮಹತ್ವದ ಮಾಹಿತಿ ನೀಡಿದರು. ಕಾರ್ಯಕ್ರಮದ ಪ್ರಮುಖ ಅಂಶವಾಗಿ, ಪೋಷಕತ್ವ ಯೋಜನೆಯ ಸಂಯೋಜಕರು ನಾಗರಾಜ್ ಮಾನಸಗಲ್ ಅವರು 'ಪೋಷಕತ್ವ'ದ ವ್ಯಾಖ್ಯಾನವನ್ನು ಸ್ಪಷ್ಟಪಡಿ ಸಿದರು. "ಪೋಷಕತ್ವ ಎಂದರೆ ಕಾನೂನಿನ ಪ್ರಕಾರ ಪಾಲನೆ, ಪೋಷಣೆ ಮತ್ತು ರಕ್ಷಣೆಯಿಂದ ವಂಚಿತರಾದ ಮಕ್ಕಳು ಅಥವಾ ತಮ್ಮ ಕುಟುಂಬದ ಹಾರೈಕೆಯಿಂದ ವಂಚಿತರಾದ ಮಕ್ಕಳಿಗೆ ತಾತ್ಕಾಲಿಕವಾಗಿ ಪರಿವಾರದ ಮೂಲಕ ಸಿಗುವ ಕಾಳಜಿಯಾಗಿದೆ," ಎಂದು




ಇವರು ಬಾಲ ನ್ಯಾಯ ಕಾಯ್ದೆ 2015 ಕಲಂ 44ರ ಅನ್ವಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಮೇರೆಗೆ, ಮಗುವಿನ ಪಾಲನೆಗಾಗಿ ಜೈವಿಕ ಕುಟುಂಬವಲ್ಲದ ಬೇರೆ ಕುಟುಂಬಕ್ಕೆ ಎರಡು ವರ್ಷಕ್ಕೆ ಮೀರದ ಅವಧಿಗೆ ತಾತ್ಕಾಲಿಕ ಅಥವಾ ವಿಸ್ತರಿಸಲ್ಪಟ್ಟ ಅವಧಿಗೆ ಮಗುವನ್ನು ಒದಗಿಸುವ ಉದ್ದೇಶವನ್ನು ವಿವರಿಸಿದರು. ಭಗವಂತರಾಯ್ ಅವರು ನಿರೂಪಣೆ ಮಾಡಿದರು, ಬಸವಲಿಂಗಪ್ಪ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಡಾನ್ ಬೋಸ್ಕೋ ಸಂಯೋಜಕರು ಸಿದ್ದಲಿಂಗಪ್ಪ, ಎಚ್.ಸಿ. ಬಸವರಾಜ, ಶ್ರೀಮಂತ, ಸುಜಾತ ಮತ್ತು ಡಾನ್ ಬೋಸ್ಕೋ ಶಾಲೆ ಶಿಕ್ಷಕಿಯರು ಉಪಸ್ಥಿತರಿದ್ದರು.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 8, 9ರಂದು ಪ್ರವೇಶ ಪರೀಕ್ಷೆ

**ರಾಯಚೂರು,ನ.7–** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಯುಪಿಎಸ್ ಗೆಜೆಟೆಡ್ ನಾಗರೀಕ ಸೇವೆ, ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರ್ ಮತ್ತು ಗ್ರೂಪ್–ಸಿ ಪರೀಕ್ಷಾ ಪೂರ್ವ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ನವೆಂಬರ್ 8 ಹಾಗೂ 9ರಂದು ಪ್ರವೇಶ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿದ್ದು, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಹಾಜರಾಗುವಂತೆ ಕೋರಲಾಗಿದೆ.

ನಗರದ ಬೋಳಮಾನದೊಡ್ಡಿ ರಸ್ತೆಯ ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿ ಶಾಲೆಯಲ್ಲಿ ನವೆಂಬರ್ 8ರ ಬೆಳಿಗ್ಗೆ 10:30 ರಿಂದ 12:30 ಘಂಟೆಯವರೆಗೆ ಗ್ರೂಪ್–ಸಿ ಪರೀಕ್ಷಾ ಪೂರ್ವತರಬೇತಿಗೆ ಪ್ರವೇಶ ಪರೀಕ್ಷೆ ಹಾಗೂ ನವೆಂಬರ್ 9ರ ಬೆಳಿಗ್ಗೆ 10:30 ರಿಂದ 12:30 ಯುಪಿಎಸ್ ಗೆಜೆಟೆಡ್ ನಾಗರೀಕ ಸೇವೆ, ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರ್ ನಡೆಸಲಾಗುವುದು. ನಂತರ 2:00 ಘಂಟೆಯಿಂದ 3;30 ವರೆಗೆ 2ನೇ ಪೇಪರ್ ನಡೆಸಲಾಗುತ್ತಿದ್ದು, ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳು ಸೇವಾಸಿಂಧು ವಿಳಾಸ: https://sevasindhu.karnataka.gov.in/Minority_HallTicket_App/Hall_Ticket.aspx ಲಿಂಕ್‌ನ್ನು ಬಳಸಿಕೊಂಡು ಪ್ರವೇಶ ಪತ್ರವನ್ನು ಪಡೆದು ಪ್ರವೇಶ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೈಬರ್ ವಂಚನೆ:31.64 ಲಕ್ಷ ರೂ ಕಳೆದುಕೊಂಡ ಔಷಧಿ ವ್ಯಾಪಾರಿ

**ಕಲಬುರಗಿ,ನ.7–** ಹೆಚ್ಚಿನ ಹಣದ ಲಾಭ ಆಮಿಷವೊಡ್ಡಿದ ಸೈಬರ್ ವಂಚಕರು ಔಷಧಿ ವ್ಯಾಪಾರಿಗೆ 31.64 ಲಕ್ಷ ರೂ ವಂಚನೆ ಮಾಡಿದ ಘಟನೆ ನಗರದಲ್ಲಿ ಜರುಗಿದೆ.ಶಿವಾಜಿ ನಗರದ ನಿವಾಸಿ ಶರಣಬಸಪ್ಪ ರಾಚಣ್ಣ ಮೈದರಗಿ ವಂಚನೆಗೊಳಗಾದ ವ್ಯಕ್ತಿ.ನುವಾಮಾ ವೆಲ್ತ್ ಮ್ಯಾನೇಜಮೆಂಟ್ ಲಿಮಿಡೆಡ್ ಎಂಬ ನಕಲಿ ಶೇರ್ ಮಾರುಕಟ್ಟೆ ಕಂಪನಿಯ ಆಪ್ ಮತ್ತು ವಾಟ್ಸ್‌ಪ್ ಗುಂಪು ರಚಿಸಿದ 6 ಜನ ವಂಚಕರು ನಿಗದಿತ ಬ್ಯಾಂಕ್ ಖಾತೆಗೆ ಹಂತಹಂತವಾಗಿ ಹಣ ಜಮಾ ಮಾಡುವಂತೆ ಶರಣಬಸಪ್ಪ ಅವರಿಗೆ ನಂಬಿಸಿದ್ದರು.ನಂತರ ಲಾಭ ನೀಡದೇ ಠೇವಣಿ ಮಾಡಿದ ಹಣ ನೀಡದೇ ಸಂಪರ್ಕ ಕಡಿತಗೊಳಿಸಿದ್ದರು.ಈ ಕುರಿತು ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಮಾಜದಲ್ಲಿ ಸಾಮರಸ್ಯ ನಿರ್ಮಾಣಕ್ಕೆ ಕನಕದಾಸರ ಸಂದೇಶ

ಕನಕದಾಸರು ಕವಿ ವಿಶಿಷ್ಟವಾದ ಸಹಜ ಪ್ರತಿಭೆಯಿಂದ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಕನಕದಾಸರು ಕನ್ನಡ ನಾಡು–ನುಡಿ ಸಂಸ್ಕೃತಿಯಲ್ಲಿ ಬೆರೆತು ಹೋಗಿರುವ ಒಬ್ಬ ಧೀಮಂತ ವ್ಯಕ್ತಿ. ದಾಸ ಸಾಹಿತ್ಯದಲ್ಲಿ ಅವರದು ವೈಶಿಷ್ಟ್ಯಪೂರ್ಣವಾದ ವರ್ಚಸ್ಸು. ಕೀರ್ತನಕಾರರಾಗಿ, ಸಂತರಾಗಿ, ಸಮಾಜ ಸುಧಾರಕರಾಗಿ ಅವರು ಕನ್ನಡ ಸಾಂಸ್ಕೃತಿಕ ಜಗತ್ತಿಗೆ ನೀಡಿರುವ ಕೊಡುಗೆ ಅನನ್ಯವಾದದ್ದು. ಅವರು ಸಮಾಜದ ಅಂಕುಡೊಂಕುಗಳನ್ನು ತಿದ್ದಿ, ಮಾನವತೆಯನ್ನು ಮೆರೆದ ಕ್ರಾಂತಿಕಾರಿ ಕವಿ. ಇವರು ತಮ್ಮ ಬದುಕು ಮತ್ತು ಕೃತಿಗಳ ಮೂಲಕ ಪ್ರತಿಪಾದಿಸಿರುವ ಜೀವನದರ್ಶನ ಸಾರ್ವಕಾಲಿಕ; ವಿಚಾರಪೂರ್ಣ. ತಮ್ಮ ಕೀರ್ತನೆ ಹಾಗೂ ಕಾವ್ಯಗಳಲ್ಲಿ ಕಾವ್ಯಗುಣದ ಜೊತೆಗೆ ಸಾಮಾಜಿಕ ಕಳಕಳಿಯನ್ನು, ದೇಸೀ ಸತ್ವವನ್ನು ಮೆರೆದಿದ್ದಾರೆ. ಕನಕದಾಸರು ದಾಸರಲ್ಲಿ ಕವಿಗಳಾಗಿದ್ದಾರೆ, ಇದೇ ಅವರ ವೈಶಿಷ್ಟ್ಯ. ಕನಕದಾಸರು ಹಲವಾರು ಭಾವಪೂರ್ಣ ಕೀರ್ತನೆಗಳನ್ನು ರಚಿಸಿದ್ದಾರೆ. ದಾಸಪರಂಪರೆಯಲ್ಲಿ ಕನಕದಾಸರ ಕಾಲವೆಂದರೆ ಕೀರ್ತನ ಸಾಹಿತ್ಯದ ಸುವರ್ಣಯುಗ ಎನ್ನಬಹುದು.

ಕನಕದಾಸರು ಒಬ್ಬ ಮಹಾನ್ ಸಂತನಂತೆ ಸರ್ವವನ್ನು ತ್ಯಾಗ ಮಾಡಿದ ಪರಿ ಗಮನಾರ್ಹವಾದುದು. ಆಗಮ್ಯ ಮಹಿಮಾಶೀಲರೂ ಆದ ಕನಕದಾಸರು, ಹಲವಾರು ಸಾಧಕರು, ಸಂತರು ಮೊದಲಾದವರ ವಿಶಾಲ ಮನೋಧರ್ಮದ ಎಳೆಯನ್ನು ಕಂಠಾಭರಣವಾಗಿ ಮಾಡಿಕೊಂಡವರು. ಕನಕದಾಸರು ಕೇವಲ ಕೀರ್ತನೆಗಳನ್ನು ರಚಿಸಲಷ್ಟೇ ಸೀಮಿತ ಪರಿಧಿಯನ್ನು ಇಟ್ಟುಕೊಳ್ಳದೆ ಒಬ್ಬ ಕವಿಯಾಗಿ, ವಿಮರ್ಶಕನಾಗಿ, ಇದಕ್ಕೂ ಪೂರ್ವದಲ್ಲಿ ಪಾಳೇಗಾರನಾಗಿ ವಿಜಯನಗರ ಸಾಮ್ರಾಜ್ಯದ ಡಣ್ಣಾಯಕನಾಗಿ ಕಾರ್ಯನಿರ್ವಹಿಸಿದರು. ಕರ್ನಾಟಕ ಧಾರ್ಮಿಕ ಪರಂಪರೆಯಲ್ಲಿ ಮಿನುಗಿದ ಸಂತ ಶ್ರೇಷ್ಠರಲ್ಲಿ ಕನಕದಾಸರ ಹೆಸರು ಅಜರಾಮರವಾಗಿದೆ. ಅವರದು ಬಹುಮುಖ ವ್ಯಕ್ತಿತ್ವ ಲೌಕಿಕ ಮತ್ತು ಆಧ್ಯಾತ್ಮಿಕ ಎರಡು ಕ್ಷೇತ್ರದಲ್ಲೂ ಅನುಭವ, ಅನುಭಾವವನ್ನು ಪಡೆದವರು. ಬೀರಪ್ಪ ಮತ್ತು ಬಚ್ಚಮ್ಮ ದಂಪತಿಗಳ ಮಗನಾಗಿ ಹುಟ್ಟಿದ ತಿಮ್ಮಪ್ಪ ಮುಂದೆ ಕನಕದಾಸನಾದ ಪರಿ ವಿಸ್ಮಯದಿಂದ ಕೂಡಿದೆ. ಕನಕದಾಸರು ಪ್ರಸಿದ್ಧ ಕೀರ್ತನಾಕಾರರೆಂದು ಹೆಸರು ಪಡೆದವರು. ಅವರ ಕೀರ್ತನೆಗಳಲ್ಲಿ ಭಕ್ತಿ, ವೈರಾಗ್ಯ, ಜ್ಞಾನಗಳಲ್ಲದೆ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಉತ್ತಮ ಸಮಾಜ ರೂಪಿಸುವ ಮಾರ್ಗದರ್ಶನಗಳು ಅಲ್ಲಿವೆ. ಅವರು ರಚಿಸಿದ ರಾಮಧಾನ್ಯ ಚರಿತ್ರೆ, ಮೋಹನ ತರಂಗಿಣಿ, ನಳಚರಿತ್ರೆ ಮತ್ತು ಹರಿಭಕ್ತಸಾರಗಳು ಒಂದೊಂದು ಮುತ್ತುಗಳು. ಅವುಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ತಿರುಳು, ಸಮಾಜದ ವಿಡಂಭನೆ, ಅಸಮಾನತೆ, ಜಾತಿಯತೆ, ಸ್ತ್ರೀ ಶೋಷಣೆಗಳ ವಿರುದ್ಧ ಧ್ವನಿಯಾಗಿವೆ. ದಾಸ ಸಾಹಿತ್ಯದಲ್ಲಿ ಕವಿಯಾಗಿಯೂ ದಾಸರಾಗಿಯೂ ಮಹಾನ್ ಸಂತನಾಗಿಯೂ ಹೊರಹೊಮ್ಮಿದರು. ಕನಕದಾಸರ ಕೀರ್ತನೆಗಳು ನಿತ್ಯವೂ ಹೊಸ ಚೈತನ್ಯ ತಂದು ಕೊಡುವ, ಸಮಕಾಲೀನ ಪ್ರಜ್ಞೆಯನ್ನು ಮೂಡಿಸುವ, ಸಾಮಾಜಿಕ ಚಿಂತನೆಗೆ ಒರೆಹಚ್ಚಿ ವೈಚಾರಿಕ ಬೋಧನೆ ನೀಡುವ ಬಂಡಾಯ ಮನೋಭಾವದ ಚಿತ್ರಗಳನ್ನು ಕೊಡುತ್ತದೆ.

ಕನಕದಾಸರು ಸಾಮಾಜಿಕ ವಿಡಂಬನೆಯ ಮೂಲಕ ಲೋಕದ ಡೊಂಕನ್ನು ಕಟುವಾಗಿ ಟೀಕಿಸಿದರು. ಇವರು ಕೆಳವರ್ಗದಿಂದ ಬಂದು ದಾಸಪರಂಪರೆಯಲ್ಲಿ ಅಷ್ಟು ಪ್ರಸಿದ್ಧಿಯಾದರೆಂದರೆ ಅದಕ್ಕೆ ಅವರ ಬದುಕು ಕಾರಣ. ದಾಸರು ಹರಿತವಾದ ಕೀರ್ತನೆಗಳಿಂದ ಜನಮನ ಮುಟ್ಟುವಂತೆ ತಮ್ಮ ಚಿಕಿತ್ಸಕ ದೃಷ್ಟಿಯಿಂದ ಸಮಾಜವನ್ನು ನೋಡುತ್ತಾ ಸಮಾಜದ ವರ್ಗ, ವರ್ಣವ್ಯವಸ್ಥೆಯನ್ನು ಹೋಗಲಾಡಿಸಲು ಸಂಪೂರ್ಣ ಪ್ರಯತ್ನ ಮಾಡಿದ್ದಾರೆ.



ತಮ್ಮ ವಿಶಿಷ್ಟ ನಿಲುವುಗಳಿಂದ ವಚನಕಾರರಂತೆಯೇ ಹರಿದಾಸರೂ ಕೂಡ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹರಿ ಸರ್ವೋತ್ತಮತ್ವವನ್ನು ಎತ್ತಿ ಹಿಡಿದವರು. ಆದರೆ ವಚನಕಾರರದ್ದು ಹರ ಪಾರಮ್ಯ. ಇಬ್ಬರ ಉದ್ದೇಶ ಒಂದೇ. ಸಮಾಜದಲ್ಲಿ ನಿದ್ರೆಗೈಯ್ಯುತ್ತಿದ್ದ ದೀನರನ್ನು ಬಡಿದೆಬ್ಬಿಸಿ ಕಾವ್ಯದ ರಸದೌತಣದ ಅಡುಗೆಯನ್ನು ಬಡಿಸುತ್ತಲೇ, ಉಣಬಡಿಸಲು ನೂರಾರು ಜನರಿಗೆ ಕರೆ ನೀಡಿದರು. ಸ್ವಯಂ ಪ್ರೇರಿತರಾಗಿ ನೂರಾರು ಜನರು ವಚನಗಳನ್ನು ಕೀರ್ತನೆಗಳನ್ನು ರಚಿಸಿದರು. ಆ ಮೂಲಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಹರಿದಾಸರಿಗೆ ಅದರಲ್ಲೂ ದಾಸಸಾಹಿತ್ಯದ ಅಶ್ವಿನೀ ದೇವತೆಗಳೆನಿಸಿದ ಪುರಂದರ, ಕನಕದಾಸರಿಗೆ ಸಲ್ಲುತ್ತದೆ.

ವರ್ಣಾಶ್ರಮ ಧರ್ಮಗಳ ಪಾಲನೆಯು ಇನ್ನೂ ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತಿದ್ದ ಕಾಲದಲ್ಲಿಯೇ ಅದರ ಕಟ್ಟುಪಾಡುಗಳನ್ನು ಮೀರಿ ಕ್ರಾಂತಿಯನ್ನು ಉಂಟು ಮಾಡಿದವರು. ಕನಕದಾಸರು ಸ್ವತಂತ್ರ ಮನೋವೃತ್ತಿಯವರು. ಸಮನ್ವಯಭಾವ ಪರಂಪರೆಯ ಕೆಲವು ವಿಚಾರಗಳಿಗೆ ಬದ್ಧರಾಗಿರುವುದು ಅವರ ಕೃತಿಗಳ ಅಭ್ಯಾಸದಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಇಂದಿನ ವಿಚಾರವಾದಿ ವಿಮರ್ಶಕರಿಗೆ, ಓದುಗರಿಗೆ ಅವರ ಕೃತಿಗಳಲ್ಲಿ ಒಡಮೂಡಿದ ಮುಗ್ಧ ಭಕ್ತಿ, ಅನನ್ಯ ಶರಣಾಗತಿ, ದೈವೀಕೃಪೆಯ ಮಹಿಮೆ, ಕರ್ಮ ಸಿದ್ಧಾಂತದಲ್ಲಿಯ ಶ್ರದ್ದೆ ನೆಲೆಸಿವೆ. ಆದರೂ ಅವರು ಬದುಕಿದ್ದ ಕಾಲ ಮತ್ತು ಪರಿಸರದ ಹಿನ್ನೆಲೆಯಲ್ಲಿ ಅವರ ಕೃತಿಗಳನ್ನು ಪರಿಶೀಲಿಸಿದಾಗ ಕನಕದಾಸರು ಅನುಭಾವಿ ಸಂತರಾಗಿ, ಕವಿಯಾಗಿ ಕಾಣಿಸುತ್ತಾರೆ. ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡ ಸಮಾಜ ವಿಮರ್ಶೆ, ಸಮನ್ವಯ ದೃಷ್ಟಿ, ಪ್ರೀತಿ, ವಾತ್ಸಲ್ಯ ಭಾವನೆ, ಪತಿತೋದ್ಧಾರ ವಿಚಾರಗಳು ಎಲ್ಲರನ್ನು ಆಕರ್ಷಿಸುತ್ತವೆಯೆಂದು ಹೇಳಬಹುದು. ಓದುಗರನ್ನು ಸೆಳೆಯುವಂತಹ ಅಂಶಗಳು ಕನಕದಾಸರ ಕೃತಿಗಳಲ್ಲಿ ಪ್ರತಿಪಾದನೆಗೊಂಡಿರುವುದು ಸ್ಪಷ್ಟವಾದದ್ದು. ಈ ದೃಷ್ಟಿಯಿಂದ ಇಂದಿನ ತಾಂತ್ರಿಕ, ವಿಮಾರ್ಶಾತ್ಮಕ ವಿಚಾರವಾದಿಗಳ ಕಾಲದಲ್ಲಿಯು ಕನಕದಾಸರ ಕೃತಿಗಳು ಸಮಾಜಕ್ಕೆ ಪ್ರಸ್ತುತವೆನಿಸುತ್ತವೆ.

ಜಾತಿ ಜಾತಿಗಳ ನಡುವಿನ ಅಸಮಾಧಾನವನ್ನು ಕಳೆಯಲು ಸಮಾಜಸುಧಾರಣೆ ಮಾಡಲು ತೊಡಗಿದ ವಿಚಾರವನ್ನು ಕನಕದಾಸರು ರಾಮಧಾನ್ಯ ಚರಿತ್ರೆಯಲ್ಲಿ ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ಕನಕದಾಸರು ರಾಮಧಾನ್ಯ ಚರಿತ್ರೆಯಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಸಂಘರ್ಷವನ್ನು ರಾಗಿ ಮತ್ತು ಭತ್ತ ಧಾನ್ಯಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಇದರಲ್ಲಿ ಸಂಘರ್ಷವೆಂಬುದು ತಾತ್ವಿಕ ನೆಲೆಯಲ್ಲಿ ನಿರೂಪಿತವಾಗಿದ್ದರೂ ಈ ಎರಡೂ ವರ್ಗಗಳು ಸಹಮತದಿಂದ ಸಮನ್ವಯದ ರೀತಿಯಲ್ಲಿ ಬದುಕಬೇಕೆಂಬುದನ್ನು ಪ್ರತಿಪಾದಿಸಿದ್ದಾರೆ. ಶ್ರೀ ರಾಮನ ಎದುರಿನಲ್ಲಿ ಸಂಧಾನವೇರ್ಪಡಿಸಿ ನ್ಯಾಯತೆಯನ್ನು ತೋರಿಸಿರುವುದು ಕನಕದಾಸರ ಸಮನ್ವಯ ಮನೋಧರ್ಮಕ್ಕೆ ಸಾಕ್ಷಿಯಾಗಿದೆ. ಸಭೆಯಲ್ಲಿ ರಾಗಿಯನ್ನು ಶ್ರೇಷ್ಠವೆಂದು ಹೊಗಳಿದಾಗ ಭತ್ತವು ಅವಮಾನಕ್ಕೆ ಗುರಿಯಾಗಿ ತಲೆತಗ್ಗಿಸಿ ನಿಲ್ಲುತ್ತದೆ. ಅವಮಾನಗೊಂಡ ಭತ್ತವನ್ನು ಸಮಾಧಾನಪಡಿಸಿ ಬರಗಾಲದಲ್ಲಿ ಬಡವರಿಗೆ ನೆರವಾಗುವುದು ರಾಗಿ ಆದ್ದರಿಂದ ರಾಗಿಯನ್ನು ಹೊಗಳುವುದು ಸರಿ ಇದರಲ್ಲಿ ಅನ್ಯಭಾವ ಇಲ್ಲ. ದೀನ–ದರಿದ್ರರನ್ನು ಕಷ್ಟದಲ್ಲಿ ಕಾಪಾಡುವುದೇ ಜೀವನದ ಪರಮಧ್ಯೆಯವೆಂಬುದನ್ನು ಕನಕದಾಸರು ಕಾವ್ಯದ ಮೂಲಕ ತಿಳಿಸಿಕೊಟ್ಟಿದ್ದಾರೆ. ಇದು ಕನಕದಾಸರ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ. ಆದರೆ ಎಂದಿನಿಂದಲೂ ಸಮಾಜದಲ್ಲಿ ಬೇರೂರಿರುವ ಮೇಲು–ಕೀಳು, ಬಡವ–ಶ್ರೀಮಂತ ಎಂಬಂಥ ತಾರತಮ್ಯ ಭಾವನೆಗಳನ್ನು ಕಿತ್ತೆಸೆಯುವಂತಹ ಕೆಲಸವನ್ನು ತಮ್ಮ ಅನುಭಾವದ ಸಾಂಕೇತಿಕವಾಗಿ ತಮ್ಮ ಅಭಿವ್ಯಕ್ತಿಯಾಗಿದೆ.

ಜನಪದರು ಭಕ್ತ ಕನಕದಾಸರನ್ನು ಅನೇಕ ಬಗೆಯಾಗಿ ಹೊಗಳುವ ಗಾದೆಯ ಮಾತುಗಳನ್ನು ನೋಡಬಹುದು. 'ಕನಕನ ತಾಳಾಗು ಇಲ್ಲದಿದ್ದರೆ ಹಾಳಾಗು' ತಾಳವು ಭಕ್ತಿಯ ನಾದವನ್ನು ನೀಡುತ್ತದೆ ಎಂಬುದಾಗಿ ನಂಬಿದವರಾಗಿದ್ದಾರೆ. 'ತಾಳಿದವನು ಬಾಳಿಯಾನು' ಎಂಬ ಗಾದೆಗೂ 'ತಾಳು' ಎಂಬ ಒಳ ಅರ್ಥಕ್ಕೂ ಸಂಬಂಧ ಇದ್ದೇ ಇದೆ. ಕೈ ತಾಳಿಗೂ ತಾಳುವುದಕ್ಕೂ ಸಮಾನಾರ್ಥವನ್ನು ಹೊಂದಿಸಿ ಹೇಳುವ ರೂಢಿಯೂ ಇದೆ. 'ರಾಗಿಯ ಉಂಡು ರಾಗಾ ಮಾಡು' ಎಂಬ ಗಾದೆಯೂ ಇದೆ. ರಾಗಿಯ ಮಹಿಮೆಯನ್ನು 'ರಾಮಧಾನ್ಯ' ಚರಿತ್ರೆಯಲ್ಲಿ ಸಂತ ಕನಕದಾಸರು ವಿವರಗಳನ್ನು ಕಾವ್ಯದ ಮುಖಾಂತರ ನೀಡಿರುವರು. ಈ ಕಾವ್ಯಗಳ ಮೂಲಕ ಬಂಡಾಯದ ಧ್ವನಿಯನ್ನು ಎತ್ತಿದ ದಾಸರಲ್ಲಿ ಮೊದಲಿಗನಾಗಿದ್ದಾನೆ. ಕನಕದಾಸರು ತಮ್ಮ ಕೃತಿಗಳಲ್ಲಿ ಹೆಚ್ಚಾಗಿ ಶಾಸ್ತ್ರ ಜಂಜಡಗಳಿಗೆ, ಮತ ತತ್ವ ಪ್ರತಿಪಾದನೆಗೆ ಮನಗೊಡದೆ ಏಕಾಂತ ಭಕ್ತಿಯನ್ನೂ, ಸರ್ವಾರ್ಪಣ ಮನೋಭಾವವನ್ನೂ, ಜಗತ್ತಿನ ಚಟುವಟಿಕೆಗಳು ಹಂಚಾಲಿತ ಎಂಬ ತತ್ವವನ್ನೂ ಪ್ರತಿಪಾದಿಸುತ್ತಾರೆ. ಸಾಮಾಜಿಕ ಗೀತೆಗಳಲ್ಲಿ ಜನತೆಯ ಮೌಢ್ಯ ಕಂದಾಚಾರ, ಪೊಳ್ಳುನಂಬಿಕೆ, ವರ್ಣವ್ಯವಸ್ಥೆಯ ಠಕ್ಕನ್ನು ಕಟುವಾಗಿ, ತೀವ್ರವಾಗಿ ಖಂಡಿಸುತ್ತಾರೆ.

ಹಿಂದೂ ಧರ್ಮದ ಅನಿಷ್ಟ ಪದ್ಧತಿಗಳಲ್ಲಿ ಅಸ್ಪೃಶ್ಯತೆಯು ಒಂದು. ಈ ಅಸ್ಪೃಶ್ಯತೆಯ ಅವಮಾನವನ್ನು ಸ್ವತಃ ಅನುಭವಿಸಿದ ಕನಕದಾಸರು ಅದನ್ನು ತೀವ್ರವಾಗಿ ಖಂಡಿಸಿದ್ದಾರೆ. ಸಮಾಜದಲ್ಲಿ ವರ್ಣ, ಜಾತಿ. ಅಸ್ಪೃಶ್ಯತೆ, ಕುಲ ಇವೆಲ್ಲವೂ ಮನುಷ್ಯರ ನಡುವೆ ಇರುವ ಅಡ್ಡಗೋಡೆಗಳಾಗಿವೆ.

**'ಕುಲ ಕುಲ ಕುಲವೆಂದು ಹೊಡೆದಾಡದಿರಿ**

**ನಿಮ್ಮಕುಲದ ನೆಲೆಯೇನಾದರೂ ಬಲ್ಲಿರಾ**

**ಕುಲದ ಕುಲವೆನ್ನುತಿಹರು ಕುಲವದ್ಯಾವುದು ಸತ್ಯಸುಖ್ಯವುಳ್ಳ ಜನರಿಗೆ?**

**ಆತ್ಮ ಯಾವ ಕುಲ ಜೀವ ಯಾವ ಕುಲ ತತ್ವಂದ್ರೀಯ ಕುಲ ಪೇಳಿರಯ್ಯಾ'.** ಈ ಸಾಲು ಜಾತಿ ಸಂಘರ್ಷಗಳನ್ನು ವಿರೋಧಿಸುತ್ತವೆ ಮತ್ತು ಎಲ್ಲರೂ ಒಂದೇ ಎನ್ನುವ ಸಮಾನತೆಯ ಸಂದೇಶವನ್ನು ಸಾರುತ್ತವೆ. ಕುಲವನ್ನು ಆಧರಿಸಿ ಹೊಡೆದಾಡುವ ಬದಲು, ಮಾನವನ ಮೂಲವನ್ನು ಪ್ರಶ್ನಿಸಬೇಕು, ಏಕೆಂದರೆ ಆತ್ಮ ಮತ್ತು ಇಂದ್ರಿಯಗಳಿಗೆ ನಿರ್ದಿಷ್ಟ ಕುಲವಿಲ್ಲ ಎಂದು ಕನಕದಾಸರು ಹೇಳಿದ್ದಾರೆ. ಈ ಕೀರ್ತನೆಯು ಮಾನವೀಯ ಮೌಲ್ಯಗಳನ್ನು ಎತ್ತಿ ತೋರಿಸುತ್ತದೆ ಮತ್ತು ಸಾಮಾಜಿಕ ಸಾಮರಸ್ಯವನ್ನು ಪ್ರೋತ್ಸಾಹಿಸುತ್ತದೆ. ಸಮಾಜದಲ್ಲಿ ಎಲ್ಲರೂ ದುಡಿಯುವುದು ಹೊಟ್ಟೆಗಾಗಿ, ಬಟ್ಟೆಗಾಗಿ ಎನ್ನುವ ವಾಸ್ತವಿಕ ಸತ್ಯವನ್ನು ಜನರಿಗೆ ತಿಳಿಸಿಕೊಟ್ಟವರು. ಇರುವುದು ಒಂದೇ ಭೂಮಿ, ಕುಡಿಯುವ ಜಲವೆಲ್ಲಾ ಒಂದೇ ಎನ್ನುವ ಸತ್ಯವನ್ನು ಜಗಕ್ಕೆ ಸಾರಿದವರು. ಕನ್ನಡ ಸಾಹಿತ್ಯಕ್ಕೆ ಕನಕದಾಸರ ಕೊಡುಗೆ ಅನನ್ಯ ಒಟ್ಟಿನಲ್ಲಿ ಕನಕದಾಸರು ಬಾಳಿದ ರೀತಿ, ಅವರ ಆದರ್ಶ ವ್ಯಕ್ತಿತ್ವ, ತ್ಯಾಗಮಯ ಜೀವನ ದೇವರಲ್ಲಿ ಶರಣಾಗತಿ ಭಾವ ಇವೆಲ್ಲವೂ ಇಂದಿಗೂ ಪ್ರಸ್ತುತವೆನಿಸುತ್ತವೆ.


ಕನಕದಾಸರ ಜಯಂತಿ ಆಚರಣೆಯು ಕೇವಲ ಒಂದು ಧಾರ್ಮಿಕ ವಿಧಿವಿಧಾನವಲ್ಲ. ಕನಕದಾಸರ ಚಿಂತನೆಗಳು ಜನಮಾನಸದಲ್ಲಿ ಜೀವಂತವಾಗಬೇಕು. ನಾವೆಲ್ಲರೂ ನಮ್ಮೊಳಗಿನ ಭೇದಭಾವಗಳನ್ನು ತೊರೆದು ಮಾನವೀಯತೆ, ನೈತಿಕತೆ, ಶ್ರದ್ಧೆ ಮತ್ತು ಸಹಾನುಭೂತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅದು ನಮ್ಮ ಸಂವೇದನೆಗಳ ಪರಿಶೀಲನೆ, ಮೌಲ್ಯಗಳ ಪುನರುತ್ಥಾನ ಮತ್ತು ಮಾನವೀಯತೆಯ ಸ್ಮರಣೆ. ಇಂದಿನ ದಿನಮಾನದಲ್ಲಿ ಕನಕದಾಸರ ತತ್ವಗಳು ಸಾಮಾಜಿಕ, ರಾಜಕೀಯ ಮತ್ತು ನೈತಿಕ ಬದುಕಿಗೆ ಹೊಸ ದಾರಿ ತೋರಿಸುತ್ತವೆ. ಅವರ "ಭಕ್ತಿ ಅಂದರೆ ಮಾನವ ಸೇವೆ" ಎಂಬ ವಾಕ್ಯವು ಇಂದಿನ ಸಾಮಾಜಿಕ ವ್ಯವಸ್ಥೆಗೆ ದಾರಿದೀಪವಾಗಿವೆ. ಅವರ ಜೀವನದಿಂದ ನಾವು ಕಲಿಯಬೇಕಾದ ಮಹತ್ವದ ಪಾಠವೆಂದರೆ ಧರ್ಮ, ಭಕ್ತಿ ಮತ್ತು ಜ್ಞಾನ ಎಲ್ಲವೂ ಮನುಷ್ಯನ ಸೇವೆಯಲ್ಲಿ ನಿಭಾಯಿಸಬೇಕು. ಸಮಾನತೆ, ಸೌಹಾರ್ದತೆ ಮತ್ತು ಪ್ರಜ್ಞೆ ಇವುಗಳೆಲ್ಲ ಕನಕದಾಸರ ತತ್ವಗಳ ಹೃದಯಭಾಗ. ಆದ್ದರಿಂದ, ಕನಕದಾಸರ ಜಯಂತಿ ಪ್ರತಿವರ್ಷವೂ ನಮ್ಮೆಲ್ಲರ ಮನಸ್ಸಿನಲ್ಲಿ ಹೊಸ ಚೈತನ್ಯ ತುಂಬುವ ಮಾನವೀಯ ಹಬ್ಬವಾಗಬೇಕು.

**–ವಿಜಯಕುಮಾರ. ಆರ್. ಮಶಿಹಾಳ**

**ಸಂಶೋಧನಾ ವಿದ್ಯಾರ್ಥಿ**

**ಕನ್ನಡ ವಿಶ್ವವಿದ್ಯಾಲಯ, ಹಂಪಿ.**

**ವಿಸ್ತರಣಾ ಕೇಂದ್ರ ದೇವದುರ್ಗ**



**Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H**